ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 08 RNI Number : KNKAN/25/A2770 08-01-2026 Thursday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :08 ರಾಯಚೂರು 08-01-2026 ಗುರುವಾರ ಪುಟ 04 ಬೆಲೆ ರೂ.2/- ಮೊ:8660146563

ನನ್ನ ಆಡಳಿತ ತೃಪ್ತಿ ತಂದಿದೆ; ಜನರ ಆಶೀರ್ವಾದ ಇರುವವರೆಗೆ ರಾಜಕೀಯದಲ್ಲಿರುತ್ತೇನೆ : ಸಿಎಂ

ಹಾವೇರಿ.ಜ.07-

ರಾಜಕಾರಣದಲ್ಲಿ ಇರಬೇಕಾದರೆ ಜನರ ಆಶೀರ್ವಾದ ಇರಬೇಕು. ಅವರ ಆಶೀರ್ವಾದದಿಂದ ಇಲ್ಲಿಯವರೆಗೂ ಸಾಗಿ ಬಂದಿದ್ದು, ಜನರ ಆಶೀರ್ವಾದ ಇರುವವರೆಗೆ ರಾಜಕೀಯದ ಲ್ಲಿರುತ್ತೇನೆ. ನನ್ನ ಆಡಳಿತ ತೃಪ್ತಿ ತಂದಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು .



ಅವರು ಇಂದು ಹಾವೇರಿಯ ಕೊಳ್ಳಿ ಪಾಲಿಟೆಕ್ನಿಕ್ ಆವರಣದ ಹೆಲಿಪ್ಯಾಡ್‌ನಲ್ಲಿ ಮಾಧ್ಯ ಮದವ ರೊಂದಿಗೆ ಮಾತನಾಡಿದರು.

ಹಾವೇರಿ ವೈದ್ಯಕೀಯ ಕಾಲೇಜು ಪೂರ್ಣಗೊಂಡಿದ್ದು, ಇದಕ್ಕೆ ಸುಮಾರು 500 ಕೋಟಿಗಳು ವೆಚ್ಚವಾಗಿದೆ. ಇದನ್ನು ನಾನೇ ಘೋಷಣೆ ಮಾಡಿದ್ದೆ ಹಾಗೂ ಉದ್ಘಾಟನೆಯನ್ನು ನಾನೇ ಮಾಡುತ್ತಿದ್ದೇನೆ. ಈಗಾಗಲೇ ಮೂರನೇ ಬ್ಯಾಚ್ ನಡೆಯುತ್ತಿದೆ ಎಂದರು.

ಸಿದ್ದರಾಮಯ್ಯ ಅವರ ಸರಕಾರ ಬೊಕ್ಕಸ ಖಾಲಿ ಮಾಡಿದೆ ಎಂದು ಬಿಜೆಪಿಯವರು ಮಾಡಿರುವ ಟೀಕೆಗಳಿಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು ಎಂದರು.

ಜಿಎಸ್‌ಟಿ: ರಾಜ್ಯಕ್ಕೆ ಈ ವರ್ಷ 5 ರಿಂದ 6 ಸಾವಿರ ಕೋಟಿ ನಷ್ಟ :

ಕೇಂದ್ರ ಸರಕಾರವೇ ಜಿಎಸ್.ಟಿ ಜಾರಿಗೆ ತಂದು ಎಂಟು ವರ್ಷ 24% ತೆರಿಗೆ ಸುಲಿಗೆ ಮಾಡಿ ನಂತರ ನಾವು ತೆರಿಗೆ ಕಡಿಮೆ ಮಾಡಿದ್ದೇವೆ ಎಂದರು. ಕರ್ನಾಟಕ ರಾಜ್ಯವೊಂದಕ್ಕೆ ಒಂದು ವರ್ಷಕ್ಕೆ 10 ರಿಂದ 12 ಸಾವಿರ ಕೋಟಿ ರೂ.ಕಡಿಮೆಯಾಗಿದೆ. ಈ ವರ್ಷ 5 ರಿಂದ 6 ಸಾವಿರ ಕೋಟಿ ನಷ್ಟವಾಗುತ್ತದೆ. ಇದಕ್ಕೆಲ್ಲ ಯಾರು ಹೊಣೆ. ನಾಲ್ಕೂವರೆ ಲಕ್ಷ ಕೋಟಿ ತೆರಿಗೆಯನ್ನು ನಾವು ಕೊಡುತ್ತೇವೆ. ನಮಗೆ ಕೊಡುವುದು 60 ರಿಂದ 70 ಸಾವಿರ ಕೋಟಿ ಮಾತ್ರ. ಒಂದು ರೂ ಕೊಟ್ಟರೆ 14 ಪೈಸೆ ವಾಪಸ್ಸು ಬರುತ್ತದೆ. ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ಕೊಡಲಿಲ್ಲ. 5495 ಕೋಟಿ ರಾಜ್ಯಕ್ಕೆ ಒದಗಿಸಲು 15 ನೇ ಹಣಕಾಸು ಆಯೋಗ ಶಿಫಾರಸು ಮಾಡಿತ್ತು. ಅದನ್ನೂ ಕೊಡಲಿಲ್ಲ. ಪೆರಿಫೆರಲ್ ರಿಂಗ್ ರೋಡಿಗೆ 3000 ಕೋಟಿ, ಬೆಂಗಳೂರಿನ ಕೆರೆಯ ಅಭಿವೃದ್ಧಿಗೆ 3000 ಕೋಟಿ ಕೊಡಲಿಲ್ಲ. ಏನೂ ಕೊಡಲಿಲ್ಲ. ಬಿಜೆಪಿ ನಾಲ್ಕು ವರ್ಷ ಅಧಿಕಾರದಲ್ಲಿದ್ದರೂ ವೈದ್ಯಕೀಯ ಕಾಲೇಜನ್ನು ಏಕೆ ಪೂರ್ಣಗೊಳಿಸಲಿಲ್ಲ? ಇದನ್ನು ನಾವು ಅಧಿಕಾರಕ್ಕೆ ಬಂದು ಪೂರ್ಣಗೊಳಿಸಿದ್ದೇವೆ ಎಂದರು.

ಬಳ್ಳಾರಿ ಪ್ರಕರಣ: ಬ್ಯಾನರ್ ಬಿಚ್ಚಿ ಹಾಕಿದ್ದು ಪ್ರಚೋದನೆ :

ಬಳ್ಳಾರಿ ಪ್ರಕರಣವನ್ನು ಸಿಬಿಐಗೆ ಹಸ್ತಾಂತರ ಮಾಡಬೇಕೆಂದು ಜನಾರ್ದನ ರೆಡ್ಡಿ ಶ್ರೀರಾಮುಲು ಸೇರಿದಂತೆ ಅನೇಕರು ಒತ್ತಾಯಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಮುಖ್ಯಮಂತ್ರಿಗಳು, ನಿನ್ನೆ ಕೆಪಿಸಿಸಿ ಅಧ್ಯಕ್ಷರಾದ ಡಿಕೆ ಶಿವಕುಮಾರ್ ಅವರು ಭೇಟಿ ನೀಡಿ ಮಾತನಾಡಿದ್ದಾರೆ. ಬಳ್ಳಾರಿಯಲ್ಲಿ ಗಲಾಟೆಯಾಗಿ ಒಬ್ಬ ವ್ಯಕ್ತಿ ಸಾಯಲು ಬ್ಯಾನರ್ ಅನ್ನು ಬಿಚ್ಚಿಹಾಕಿದ್ದು ಪ್ರಚೋದನೆ ಎಂದರು.

ಕಾನೂನು ಕೈಗೆತ್ತಿಕೊಂಡವರ ಮೇಲೆ ಕ್ರಮ :

ಹುಬ್ಬಳ್ಳಿಯಲ್ಲಿ ಮಹಿಳೆಯ ವಿವಸ್ತ್ರಗೊಳಿಸಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿಗಳು, ಮಹಿಳೆಯನ್ನು ಪೊಲೀಸರು ಬಂಧಿಸಲು ಹೋಗಿದ್ದ ಸಂದರ್ಭದಲ್ಲಿ ಮಹಿಳೆಯೇ ಸ್ವತಃ ವಿವಸ್ತ್ರಗೊಂಡು ಮಹಿಳಾ ಪೊಲೀಸರನ್ನು ಕಚ್ಚಿದ್ದಾರೆ. ಆಕೆಯ ಮೇಲೆ ಎಫ್‌ಐಆರ್ ಆಗಿದ್ದು , ಪೊಲೀಸರು ವಿಚಾರಣೆಗೆ ಹೋಗಿದ್ದ ಸಂದರ್ಭದಲ್ಲಿ ಅವರನ್ನೇ ಕಚ್ಚಿದ್ದಾರೆ. ಹತ್ತು ಜನಕ್ಕೂ ಹೆಚ್ಚು ಮಹಿಳಾ ಪೊಲೀಸರಿದ್ದರು. ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳಬಾರದು. ಹಾಗೆ ಮಾಡಿದವರ ಮೇಲೆ ಕಾನೂನಿನ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದರು. ಮುಖ್ಯಮಂತ್ರಿಗಳಾಗಿ ದೀರ್ಘಾವಧಿ ಆಗಿದೆ, ಪೂರ್ಣಾವಧಿಯಾಗುತ್ತದೆಯೇ ಎಂಬ ಪ್ರಶ್ನೆಗೆ, ಪಕ್ಷದ ವರಿಷ್ಠರು ಅದನ್ನು ತೀರ್ಮಾನಿಸುತ್ತಾರೆ ಎಂದರು

ರಾಯಚೂರು ಜಿಲ್ಲೆಯಲ್ಲಿ ಲೋಕಾಯುಕ್ತ ದಾಳಿ: ಸರ್ಕಾರಿ ಕಚೇರಿಗಳ ತಪಾಸಣೆ: ಗಂಭೀರ ಲೋಪಗಳ ಪತ್ತೆ

ತಪ್ಪಿತಸ್ಥ ಅಧಿಕಾರಿಗಳಿಗೆ ನೋಟಿಸ್ - ತನಿಖೆ, ಕ್ರಿಮಿನಲ್ ಕ್ರಮದ ಎಚ್ಚರಿಕೆ

ರಾಯಚೂರು, ಜ.7:

ಕರ್ನಾಟಕ ಲೋಕಾಯುಕ್ತರ ಆದೇಶದಂತೆ ರಾಯಚೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿನ ಒಟ್ಟು 61 ಸರ್ಕಾರಿ ಕಚೇರಿಗಳಿಗೆ ಲೋಕಾಯುಕ್ತ ಅಧಿಕಾರಿಗಳ ತಂಡ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಬಹುತೇಕ ಎಲ್ಲ ಇಲಾಖೆಗಳಲ್ಲೂ ಗಂಭೀರ ಆಡಳಿತಾತ್ಮಕ ಲೋಪಗಳು, ದಾಖಲೆಗಳ ಕೊರತೆ, ನಿಯಮ ಉಲ್ಲಂಘನೆ ಹಾಗೂ ನಿರ್ಲಕ್ಷ್ಯ ಬಹಿರಂಗಗೊಂಡಿದೆ. ಲೋಪಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ನೋಟಿಸ್ ಜಾರಿ ಮಾಡಿ, ಸಮರ್ಪಕ ಉತ್ತರ ಸಿಗದಿದ್ದಲ್ಲಿ ತನಿಖೆ ಹಾಗೂ ಕ್ರಿಮಿನಲ್ ಕ್ರಮ ಕೈಗೊಳ್ಳಲಾಗುವುದು ಎಂದು ಲೋಕಾಯುಕ್ತರು ಕಠಿಣ ಎಚ್ಚರಿಕೆ ನೀಡಿದ್ದಾರೆ.



ನಗರದ ನೂತನ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಲೋಕಾಯುಕ್ತ ಅಧೀಕ್ಷಕ ಕೆ.ಯು. ಪಾಟೀಲ್ ಮಾತನಾಡಿ, ಮಹಾನಗರ ಪಾಲಿಕೆ, ನಗರಸಭೆ -ಪುರಸಭೆಗಳು, ತಹಶೀಲ್ ಕಚೇ ರಿಗಳು, ನಗರಾಭಿವೃದ್ಧಿ ಪ್ರಾಧಿಕಾರ, ಅಬಕಾರಿ, ಗಣಿ-ಭೂವಿಜ್ಞಾನ, ಕೃಷಿ, ಶಿಕ್ಷಣ, ಆರೋಗ್ಯ ಸೇರಿದಂತೆ ಹಲವು ಇಲಾಖೆಗಳಲ್ಲೂ ಹಾಜರಾತಿ ವಹಿ, ನಗದು ಘೋಷಣಾ ವಹಿ, ವಾಹನಗಳ ಲಾಗ್ ಬುಕ್, ಇಂಧನ ವೆಚ್ಚ, ಅರ್ಜಿ ವಿಲೇವಾರಿ ದಾಖಲೆಗಳೇ ಇಲ್ಲದಿರುವುದು ಕಂಡುಬಂದಿದೆ ಎಂದರು.

ಜಿಲ್ಲೆಯಲ್ಲಿ 587 ಕೆರೆಗಳಿದ್ದು, ಕೇವಲ 46 ಕೆರೆಗಳ ಒತ್ತುವರಿ ಮಾತ್ರ ತಡೆಯಲಾಗಿದೆ. ಉಳಿದ ಕೆರೆಗಳ ರಕ್ಷಣೆಗೆ ತಕ್ಷಣ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಹಾಗೆಯೇ ಶುದ್ಧ ಕುಡಿಯುವ ನೀರಿನ 716 ಘಟಕಗಳಲ್ಲಿ 155 ಘಟಕಗಳು ಕಾರ್ಯರಹಿತವಾಗಿರುವುದು

3ನೇ ಪುಟಕ್ಕೆ

ಲೋಕಾಯುಕ್ತದಲ್ಲಿ ದೂರುಗಳ ಪ್ರಮಾಣ ಹೆಚ್ಚುತ್ತಿರುವುದು

ದುರದೃಷ್ಟಕರ: ಲೋಕಾಯುಕ್ತರ ಕಾರ್ಯದರ್ಶಿ ಶ್ರೀನಾಥ ಕೆ ಕಳವಳ

ರಾಯಚೂರು,ಜ. 07

ಕರ್ನಾಟಕ ಲೋಕಾಯುಕ್ತದಲ್ಲಿ 2022ರಲ್ಲಿ ಇದ್ದ 8000 ಕೇಸಗಳ ಪ್ರಮಾಣವು ಈಗ 2025ರ ಹೊತ್ತಿಗೆ 45,000ಕ್ಕೆ ಏರಿದ್ದು ದುರದೃಷ್ಟಕರ ಎಂದು ಗೌರವಾನ್ವಿತ ಕರ್ನಾಟಕ ಲೋಕಾಯುಕ್ತರ ಕಾರ್ಯದರ್ಶಿಗಳಾದ ಶ್ರೀನಾಥ ಕೆ ಅವರು ಕಳವಳ ವ್ಯಕ್ತಪಡಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನವರಿ 7ರಂದು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಂದ ನಡೆದ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಕರ್ನಾಟಕ ಲೋಕಾಯುಕ್ತದ ಅಪರ ನಿಬಂಧಕರಾದ ಎ.ವಿ.ಪಾಟೀಲ ಅವರೊಂದಿಗೆ ಪತ್ರಿಕಾಗೋಷ್ಠಿ ನಡೆಸಿ ಅವರು ಮಾತನಾಡಿದರು.

ಸರ್ಕಾರದ ಕೆಲಸ ದೇವರ ಕೆಲಸ ಎಂದು ಅರ್ಥೈಸಲಾಗಿದೆ. ಸರ್ಕಾರಿ ನೌಕರಿ ಪಡೆಯುವ ಅಧಿಕಾರಿಗಳು ಮತ್ತು ಸಿಬ್ಬಂದಿ ಅದೃಷ್ಟವಂತರು. ಅವರ ಬಗ್ಗೆ ಸಮಾಜದಲ್ಲಿ ವಿಶೇಷ ಗೌರವ ಇರುತ್ತದೆ. ಆದರೆ, ಇದನ್ನು ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಅರಿಯದೇ ಹಣದ ಆಸೆಗಾಗಿ ಲೋಪ ಎಸಗುತ್ತಿರುವುದು ಕಂಡು ಬರುತ್ತಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಲೋಪವೆಸಗಿ ವಾರಂಟ್ ಸ್ವೀಕರಿಸುವ ಹಂತಕ್ಕೆ ತಲುಪಿದ್ದು ನೋವಿನ ಸಂಗತಿ ಎಂದು ಅವರು ತಿಳಿಸಿದರು.

ಕೆರೆಗಳ ಸುರಕ್ಷತೆಗೆ ಒತ್ತು: ಕೆರೆ ಒತ್ತುವರಿ ಹಿನ್ನೆಲೆಯಲ್ಲಿ 2018ರಲ್ಲೇ ಲೋಕಾಯುಕ್ತದಿಂದ ರಾಜ್ಯದ ಎಲ್ಲ ಕಡೆಗೆ ಕೇಸ್ ದಾಖಲಿಸಲಾಗಿದೆ. ರಾಯಚೂರು ಜಿಲ್ಲೆಯಲ್ಲಿ ಒಟ್ಟು 587 ಕೆರೆಗಳಿದ್ದು, ಜನರ ಜೀವನಾಡಿಯಾದ ಈ ಕೆರೆಗಳ ಸುರಕ್ಷತೆಗೆ ಒತ್ತು ಕೊಡಬೇಕು. ಜಿಲ್ಲೆಯಲ್ಲಿ 46 ಕೆರೆಗಳ ಒತ್ತುವರಿ ತಡೆದಿದ್ದೇವೆ ಎಂದು ಅಧಿಕಾರಿಗಳು ವರದಿ ನೀಡಿದ್ದಾರೆ. 319 ಕೆರೆಗಳ ಸರ್ವೆ ನಡೆಸಿದ ಬಗ್ಗೆ ನಕ್ಷೆ ನೀಡಬೇಕು ಎಂದು ಎಡಿಎಲ್ಆರ್ ಅವರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

155 ಘಟಕ ನಿಷ್ಕ್ರಿಯ; ಅಸಮಾಧಾನ: ಅರಕೇರಾದಲ್ಲಿ 72, ದೇವದುರ್ಗದಲ್ಲಿ 72, ಲಿಂಗಸಗೂರುದಲ್ಲಿ 114, ಮಸ್ಕಿಯಲ್ಲಿ 66, ರಾಯಚೂರುದಲ್ಲಿ 107, ಸಿಂಧನೂರನಲ್ಲಿ 116 ಮತ್ತು ಸಿರವಾರದಲ್ಲಿ 57 ಸೇರಿ ಜಿಲ್ಲೆಯಲ್ಲಿ ಒಟ್ಟು 716 ಶುದ್ಧ ಕುಡಿವ ನೀರಿನ ಘಟಕಗಳ ಪೈಕಿ 561

3ನೇ ಪುಟಕ್ಕೆ

ಮಡಿವಾಳ ಸಮಾಜದ ಅಧ್ಯಕ್ಷರಾಗಿ ಶರಣಪ್ಪ ಮಡಿವಾಳ ನೇಮಕ

ಸಿರವಾರ, ಜ.7-

ಮಡಿವಾಳ ಸಮಾಜದ ದೇವದುರ್ಗ ತಾಲೂಕು ಘಟಕದ ಅಧ್ಯಕ್ಷರಾಗಿ ಶರಣಪ್ಪ ನಿಲೋಗಲ್, ಉಪಾಧ್ಯಕ್ಷರಾಗಿ ಮಹಾದೇವ ದೇವದುರ್ಗ, ಅಮರೇಶ ಹೇಮನೂರು, ಹಾಜಪ್ಪ ಗೋಪಾಳಪುರ, ಕಾರ್ಯದರ್ಶಿಯಾಗಿ ಹನುಮಂತ ಜಾಲಹಳ್ಳಿ ನೇಮಕಗೊಂಡರು.



ದೇವದುರ್ಗ ಪಟ್ಟಣದ ಅಂಬಭವಾನಿ ದೇವಸ್ಥಾನದಲ್ಲಿ ನಡೆದ ಸಭೆಯಲ್ಲಿ ಮಡಿವಾಳ ಸಮಾಜಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಈ ಸಂಘದ ಖಜಾಂಚಿಯಾಗಿ ಲಿಂಗರಾಜ ದೇವದುರ್ಗ, ಸಹ ಕಾರ್ಯದರ್ಶಿಯಾಗಿ ಅಯ್ಯಪ್ಪ ಗೂಗಲ್, ಸಂಘಟನಾ ಕಾರ್ಯದರ್ಶಿಯಾಗಿ ರಾಮಣ್ಣ ಮಲದಕಲ್, ಗೌರವಾಧ್ಯಕ್ಷರಾಗಿ ಚಂದ್ರಶೇಖರ ಚಂದನಕೇರಾ, ರಾಘರಾಮ ದೇವದುರ್ಗ, ರಂಗಪ್ಪ

3ನೇ ಪುಟಕ್ಕೆ

ಜ.18ರಂದು ರಾಯಚೂರಲ್ಲಿ ಪುಸ್ತಕ ಸಂತೆ

ಕಲ್ಯಾಣ ಕರ್ನಾಟಕದಲ್ಲಿ ಮೊದಲ ಬಾರಿಗೆ ಕಲಾ ಸಂಕುಲ ಸಂಸ್ಥೆ ವಿನೂತನ ಪ್ರಯತ್ನ

ರಾಯಚೂರು, ಜ.7:

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಮೊಟ್ಟಮೊದಲ ಬಾರಿಗೆ ರಾಯಚೂರು ನಗರದ ರಂಗಮಂದಿರ ಆವರಣದಲ್ಲಿ ಜ.18ರ ಭಾನುವಾರ ಒಂದು ದಿನದ ಪುಸ್ತಕ ಸಂತೆ ಆಯೋಜಿಸಲಾಗಿದ್ದು, ಪುಸ್ತಕ ಪ್ರೇಮಿಗಳಲ್ಲಿ ಹೊಸ ಉತ್ಸಾಹ ಮೂಡಿಸಿದೆ.



ಕಲಾ ಸಂಕುಲ ಸಂಸ್ಥೆಯ ವತಿಯಿಂದ ನಡೆಯಲಿರುವ ಈ ಪುಸ್ತಕ ಸಂತೆಯನ್ನು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರುದ ಕುಲಪತಿ ಪ್ರೊ. ಶಿವಾನಂದ ಕೆಳಗಿನಮನಿ ಅವರು ಉದ್ಘಾಟಿಸಲಿದ್ದಾರೆ. ಪುಸ್ತಕಗಳ ಉಳಿವು, ಓದು ಸಂಸ್ಕೃತಿಯ ಉತ್ತೇಜನ ಹಾಗೂ ಲೇಖಕರು-ಓದುಗರ ನಡುವಿನ ನೇರ ಸಂವಾದವೇ ಈ ಸಂತೆಯ ಮುಖ್ಯ ಉದ್ದೇಶವಾಗಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳ ಪ್ರಕಾಶಕರು, ಲೇಖಕರು ಮತ್ತು ಸಾಹಿತಿಗಳು ಈ ಸಂತೆಯಲ್ಲಿ ಭಾಗವಹಿಸಲಿದ್ದು, ರಾಯಚೂರು ನಗರದ ಸಾಹಿತ್ಯ ವಲಯಕ್ಕೆ ಹೊಸ ಚೈತನ್ಯ ನೀಡಲಿದೆ. ಸ್ಥಳೀಯ ಸಾಹಿತಿಗಳಾದ ವೀರ ಹನುಮಾನ, ಚಿದಾನಂದ ಸಾಲಿ, ಬಾಬು ಭಂಡಾರಿಗಲ್, ಈರಣ್ಣ ಬೆಂಗಾಲಿ, ಅಯ್ಯಪ್ಪಯ್ಯ ಹುಡ, ವೆಂಕಟೇಶ ಬೇವಿನಬೆಂಚಿ ಹಾಗೂ ಜಾನ್ ವೆಸ್ಲಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕಾರ್ಯಕ್ರಮವು ಕಲಾ ಸಂಕುಲ ಸಂಸ್ಥೆಯ ಅಧ್ಯಕ್ಷೆ ರೇಖಾ ಬಡಿಗೇರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಬೆಳಗ್ಗೆ 9.00ರಿಂದ ಸಂಜೆ 6.00ರವರೆಗೆ ನಡೆಯುವ ಈ ಪುಸ್ತಕ ಸಂತೆಯಲ್ಲಿ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಓದು ಸಂಸ್ಕೃತಿಗೆ ಬೆಂಬಲ ನೀಡಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

3ನೇ ಪುಟಕ್ಕೆ

ಶಿಕ್ಷಕರ ಅರ್ಹತಾ ಪರೀಕ್ಷೆ ಕಡ್ಡಾಯ ವಿರೋಧಿಸಿ 8 ರಂದು ಕಪ್ಪು ಪಟ್ಟಿ ಧರಿಸಿ ಪಾಠ- ಜಾಹೀದ್ ಪಾಶಾ

ಸಿರವಾರ, ಜ.7-

ಸೇವಾ ನಿರತ ಶಿಕ್ಷಕರಿಗೆ ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಕಡ್ಡಾಯ ಮಾಡಿರುವ ಸುಪ್ರೀಂ ಕೋರ್ಟ್ ಆದೇಶದ ನಿಯಮ ಸಡಿಲಗೊಳಿಸಬೇಕು , ಹಾಲಿ ಶಿಕ್ಷಕರಿಗೆ ನ್ಯಾಯ ಒದಗಿಸಲು ಸೂಕ್ತ ಕಾನೂನು ತಿದ್ದುಪಡಿ ತರಬೇಕು. ಇದರ ಜೊತೆಗೆ ಹಳೆ ಪಿಂಚಣಿ ಯೋಜನೆ ಮರುಜಾರಿ, ಖಾಯಂ ಶಿಕ್ಷಕರ ನೇಮಕ, ದೇಶಾದ್ಯಂತ ಎಲ್ಲಾ ಶಿಕ್ಷರಿಗೆ ಏಕರೂಪದ ವೇತನ ವ್ಯವಸ್ಥೆ ನೀಡಬೇಕೆಂದು ಆಗ್ರಹಿಸಿ ಜನವರಿ 8ರಂದು ಸಿರವಾರ ತಾಲೂಕಿನಲ್ಲೂ ಶಿಕ್ಷಕರು ತರಗತಿಯಲ್ಲಿ ಕಪ್ಪುಪಟ್ಟಿ ಧರಿಸುವುದರ ಮೂಲಕ ಪಾಠ ಮಾಡಲು ಶಿಕ್ಷಕರ ಸಂಘ ಹಾಗೂ ಫೆಕಖ ಸಂಘದ ತಾಲೂಕ ಅಧ್ಯಕ್ಷರಾದ ಜಾಹೀದ್ ಪಾಶಾ ಕುರ್ಡಿ ಮನವಿ ಮಾಡಿದ್ದಾರೆ.



ಅಖಿಲ ಭಾರತ ಶಿಕ್ಷಕರ ಫೆಡರೇಶನ್ ನೇತೃತ್ವದಲ್ಲಿ ರಚನೆಯಾಗಿರುವ ಅಖಿಲ ಭಾರತ ಶಿಕ್ಷಕರ ಸಂಘಟನೆ ಜಂಟಿ ಕ್ರಿಯಾ ಸಮಿತಿ ದೇಶಾದ್ಯಂತ ಶಿಕ್ಷಕರು ಕಪ್ಪುಪಟ್ಟಿ ಧರಿಸಿ ಜನವರಿ 8 ರಂದು ಪಾಠ ಮಾಡಲು ಕರ್ನಾಟಕದಲ್ಲೂ ರಾಜ್ಯ ಅಧ್ಯಕ್ಷ

3ನೇ ಪುಟಕ್ಕೆ

ಮಕ್ಕಳ ಜೀವನದ ಗುರಿಸಾಧನೆಗೆ ಬಾಲ್ಯ ವಿವಾಹದಿಂದ ಅಡ್ಡಿ: ಡಾ ರಮೇಶ

ರಾಯಚೂರು,ಜ.07

ಬಾಲ್ಯ ವಿವಾಹವು ಮುಖ್ಯವಾಗಿ ಹೆಣ್ಣುಮಕ್ಕಳ ಶಿಕ್ಷಣ, ಆರೋಗ್ಯ ಮತ್ತು ಭವಿಷ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಅಲ್ಲದೆ ಪಾಲಕರು ತಮ್ಮ ಮಗಳು ಅಥವಾ ಮಗನಿಗೆ ಬಾಲ್ಯ ವಿವಾಹ ಮಾಡುವುದರಿಂದ ಅವರ ಉನ್ನತ ಸಾಧನೆಗೆ ಪಾಲಕರೆ ಅಡ್ಡಿಪಡಿಸಿದಂತೆ, ಮಕ್ಕಳ ಜೀವನದ ಉನ್ನತ ಗುರಿ ಸಾಧನೆಗಾಗಿ ಹೆಣ್ಣಿಗೆ 18 ವರ್ಷ ಗಂಡಿಗೆ 21 ವರ್ಷ ತುಂಬುವವರೆಗೂ ಮದುವೆ ಮಾಡದಂತೆ ಮುಂದಾಗಬೇಕು ಎಂದು ಕಲ್ಮಲ ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ. ರಮೇಶ್ ತಿಳಿಸಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಸಂಯೋಗದಲ್ಲಿ ಇತ್ತಿಚೀಗೆ ತಾಲೂಕಿನ ಕಲ್ಮಲ ಗ್ರಾಮದ ಮೇಟ್ರಿಕ್ ಪೂರ್ವ ವಸತಿ ನಿಲಯದಲ್ಲಿ ಪ್ರೌಢ ಶಾಲಾ ಮಕ್ಕಳಿಗೆ ಹಮ್ಮಿಕೊಂಡ ಬಾಲ್ಯವಿವಾಹ ತಡೆ ಹಾಗೂ ಪೋಕ್ಸೊ ಕಾಯ್ದೆಯ ಜಾಗೃತಿ ಕುರಿತು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ಋತುಚಕ್ರ ಆರಂಭವಾದ ತಕ್ಷಣ ಮದುವೆ ಮಾಡುವ ದುಡುಕಿನ ನಿರ್ಧಾರಗಳಿಂದ ದೈಹಿಕವಾಗಿ ಗರ್ಭಕೋಶವು ಪೂರ್ಣ ಪ್ರಮಾಣದಲ್ಲಿ ಬೆಳವಣಿಗೆಯಾಗದೆ ಗರ್ಭಪಾತ, ಮಗು ಸತ್ತು ಹುಟ್ಟುವುದು, ದಿನತುಂಬದ ಹೆರಿಗೆ, ಬಾಲ್ಯದಲ್ಲಿ ಅಪೌಷ್ಟಿಕತೆ, ಅಕಾಲಿಕ ಗರ್ಭಧಾರಣೆ, ಹೆರಿಗೆಯಲ್ಲಿನ ತೊಡಕುಗಳು, ಮಗುವಿನ ಲಾಲನೆ ಪಾಲನೆಯ ಮಾಹಿತಿ ಕೊರತೆ ಕಾರಣದಿಂದ ಮಗು ಅಪೌಷ್ಟಿಕತೆಗೆ ತುತ್ತಾಗುತ್ತದೆ. ಈ ಹಿನ್ನಲೆ ಬಾಲ್ಯ ವಿವಾಹ ತಡೆ ಎಲ್ಲರೂ ಶ್ರಮಿಸೋಣವೆಂದು ತಿಳಿಸಿದರು.

ಶಾಲಾ ಮುಖ್ಯಗುರು ಚಿತ್ರಾಬಾಯಿ ಮಾತನಾಡಿ ಬಾಲ್ಯದಲ್ಲಿ ಮದುವೆ

3ನೇ ಪುಟಕ್ಕೆ



ಪ್ರಜಾಪ್ರಭುತ್ವದಲ್ಲಿ ಮತದಾನ ಪಾತ್ರ ದೊಡ್ಡದು: ಪಿ.ಎಸ್.ವಸ್ತದ್

ರಾಯಚೂರು ಜ.07

ಪ್ರಜಾಪ್ರಭುತ್ವದಲ್ಲಿ ಮತದಾನದ ಪಾತ್ರ ಬಹಳ ದೊಡ್ಡದಾಗಿದೆ. ಚುನಾವಣೆಯ ವೇಳೆಯಲ್ಲಿ ಈ ಪ್ರಕ್ರಿಯೆಯನ್ನು ವಿವಿಧ ಹಂತದ ಅಧಿಕಾರಿಗಳು ಅಚ್ಚುಕಟ್ಟಾಗಿ ಕಾರ್ಯನಿರ್ವಹಣೆ ಮಾಡುವುದರ ಮೂಲಕ ಯಶಸ್ವಿಗೊಳಿಸಬೇಕೆಂದು ರಾಜ್ಯ ಸ್ವೀಪ್ ಸಮಿತಿ ನೊಡಲ್ ಅಧಿಕಾರಿ ಪಿ.ಎಸ್.ವಸ್ತದ್ ಅವರು ಹೇಳಿದರು.

ಜನವರಿ 07ರ ಬುಧವಾರ ದಂದು ನಗರದ ಜಿಲ್ಲಾ ಪಂಚಾಯತಿಯ ಜಲ ನಿರ್ಮಲ ಸಭಾಂಗಣದಲ್ಲಿ ಸ್ವೀಪ್.ಮತ್ತು ಎನ್.ವಿ.ಡಿ ಸ್ಪರ್ಧಾ ಚಟುವಟಿಕೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಒಂದೊದು ಮತ ಅಭ್ಯರ್ಥಿಯ ಸೋಲು ಮತ್ತು ಗೆಲುವನ್ನು ನಿರ್ಧಾರ ಮಾಡುವ ಶಕ್ತಿ ಇದೆ. ಈಗ ತಮಗೆಲ್ಲ ಗೊತ್ತಿರುವ ಹಾಗೆ ಮತಯಂತ್ರದ ಮೂಲಕ ಮತದಾನದ ಪ್ರಕ್ರಿಯೆ ನಡೆಯುತ್ತಲಿದೆ. ಎಲ್ಲವೂ ಪಾರದರ್ಶಕವಾಗಿ ಚುನಾವಣೆಯ ಕಾರ್ಯಗಳು ಜರಗುತ್ತವೆ. ರಾಷ್ಟಿಯ ಮತದಾರರ ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಲ್ಲಿ ಸ್ಪರ್ಧೆಗಳನ್ನು ಮಾಡಲಾಗಿತ್ತು. ಇವು ವಿದ್ಯಾರ್ಥಿಗಳಲ್ಲಿ ಮತದಾನದ ಮಹತ್ವ ಚುನಾವಣೆಯ ಪ್ರಕ್ರಿಯೆಗಳನ್ನು ತಿಳಿಸಲು ಬಹಳ ಸಹಾಯಕವಾಗಿದೆ. ಪ್ರತಿಯೊಂದು ಪ್ರೌಢ ಶಾಲೆ, ಪದವಿ ಪೂರ್ವ ಕಾಲೇಜು. ಹಾಗೂ ಪದವಿ ಮತ್ತು ಸ್ನಾತಕೋತ್ತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತದಾರರ ಸಾಕ್ಷರತಾ ಕ್ಲಬ್‌ನ್ನು ಸ್ಥಾಪಿಸಲಾಗಿದೆ ಎಂದರು.

ವಿದ್ಯಾರ್ಥಿಗಳಲ್ಲಿ ಸ್ವೀಪ್ ಕಾರ್ಯಕ್ರಮದ ಅಡಿಯಲ್ಲಿ ರಾಷ್ಟಿಯ ಮತದಾರ ದಿನಾಚರಣೆಯ ಅಂಗವಾಗಿ ಸ್ಪರ್ಧೆಗಳನ್ನು ಆಯೋಜನೆ ಮಾಡುವುದರ ಮೂಲಕ ಪ್ರಜಾಪ್ರಭುತ್ವದ ಆಡಳಿತ ವ್ಯವಸ್ಥೆಯಲ್ಲಿ ಮತದಾನದ ಪ್ರಕ್ರಿಯೆಗಳು, ಚುನಾವಣೆಯ ಅಂಶಗಳು ಮತ್ತು ಅದರ ಮಹತ್ವವನ್ನು ತಿಳಿದುಕೊಳ್ಳಲು ಇಂತಹ ಸ್ಪರ್ಧೆಗಳು ಸಾಯಕವಾಗಿವೆ. ಅಲ್ಲದೆ ಮಾದರಿಯ ಮತದಾರರ ಪಟ್ಟಿಯ ಸಿದ್ಧಪಡಿಸಲು ಮತಗಟ್ಟೆಯ ಅಧಿಕಾರಿಗಳು ಮಾಡಬೇಕಾದ ಕಾರ್ಯ ಚಟುವಟಿಕೆಗಳು ಕುರಿತು ಮಾಹಿತಿ ನೀಡಿದರು.

3ನೇ ಪುಟಕ್ಕೆ

ಬಸವಕಲ್ಯಾಣ। ವಚನ ಸಂಶೋಧನಾ ಕೇಂದ್ರ ಅಗತ್ಯ : ಸಾಹಿತಿ ಗೋ.ರು.ಚನ್ನಬಸಪ್ಪ



ಬಸವಕಲ್ಯಾಣ,ಜ.07-

ನಗರದ ಬಂದವರ ಓಣಿ ಸಭಾಭವನದಲ್ಲಿ ಗಡ್ಡೆ ಪರಿವಾರದಿಂದ ನಡೆದ ಲಿಂಗದೀಕ್ಷೆ ಮತ್ತು ಶರಣ ಭಾರತ ಸಂಶೋಧನಾ ಕೇಂದ್ರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕದ ಅಧ್ಯಕ್ಷ ಗುರುನಾಥ ಗಡ್ಡೆ ಮತ್ತು ಪ್ರೊ.ವಿಜಯಲಕ್ಷ್ಮೀ ಗಡ್ಡೆ ದಂಪತಿಗಳ ನೇತೃತ್ವದಲ್ಲಿ ಈ ಕೇಂದ್ರ, ಶರಣ ಸಾಹಿತ್ಯದ ಸಂಶೋಧನೆ ಮತ್ತು ಪ್ರಕಟಣೆಗೆ ಆದ್ಯತೆ ನೀಡಲಿ' ಎಂದರು.

ಧಾರವಾಡದ ಅಶೋಕ ಬರಗುಂಡೆ ಮಾತನಾಡಿ, ವಚನಗಳ ಅಧ್ಯಯನ ಮತ್ತು ಲಿಂಗಾಂಗ ಯೋಗ ಪ್ರತಿಯೊಬ್ಬರು ಮಾಡುವುದು ಅವಶ್ಯಕ' ಎಂದರು.

ರಂಜಾನ ದರ್ಗಾ ಮಾತನಾಡಿ, ವಿಶ್ವ ಶಾಂತಿಗಾಗಿ ಬಸವತತ್ವದ ಪ್ರಸಾರ ಎಲ್ಲೆಡೆ ಆಗುವುದು ಅಗತ್ಯವಾಗಿದ್ದು ಸಂಘ ಸಂಸ್ಥೆಯವರು ಈ ನಿಟ್ಟನಲ್ಲಿ ಪ್ರಯತ್ನಿಸಬೇಕು' ಎಂದರು.

ಅನುಭವ ಮಂಟಪದ ಅಧ್ಯಕ್ಷ ಭಾಲ್ಕಿ ಬಸವಲಿಂಗ ಪಟ್ಟದ್ದೇವರು, ಸಾಹಿತಿ ವೀರಣ್ಣ ರಾಜೂರ, ಹರಳಯ್ಯ ಪೀಠಾಧ್ಯಕ್ಷೆ ಅಕ್ಕ ಗಂಗಾಂಬಿಕಾ, ಕಲ್ಯಾಣರಾವ್ ಮದರಗಾಂವಕರ, ಪ್ರೊ.ವಿಜಯಲಕ್ಷ್ಮಿ ಗಡ್ಡೆ, ಸಿದ್ಧಲಿಂಗ ಗಡ್ಡೆ ಮಾತನಾಡಿದರು. ಮುಖಂಡ ವೈಜನಾಥ ಕಾಮಶೆಟ್ಟಿ, ಶಿವರಾಜ ನರಶೆಟ್ಟಿ, ಬಾಬು ಹೊನ್ನಾನಾಯಕ, ಸಾವಿತ್ರಿ ಶರಣು ಸಲಗರ, ಸಿದ್ದು ಯಾಪಲಪರ್ವಿ, ಬಸವೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಬಸವರಾಜ ಕೋರಕೆ, ವಿಶ್ವಸ್ಥ ಸಮಿತಿ ಅಧ್ಯಕ್ಷ ಶಶಿಕಾಂತ ದುರ್ಗೆ, ಅನಿಲಕುಮಾರ ರಗಟೆ, ಡಾ.ಜಿ.ಎಸ್.ಭುರಳೆ, ವೀರಣ್ಣ ಹಲಶೆಟ್ಟೆ, ಗುರುನಾಥ ಗಡ್ಡೆ ಉಪಸ್ಥಿತರಿದ್ದರು. ವಚನಗ್ರಂಥ ಮತ್ತು ದಿನದರ್ಶಿಕೆ ಬಿಡುಗಡೆ ಮಾಡಲಾಯಿತು.

ಪಾಲಕರಿಂದ ಲಿಂಗದೀಕ್ಷೆ ಕಾರ್ಯಕ್ರಮದಲ್ಲಿ ಡಾ.ಬಾಬಾಸಾಹೇಬ್ ಗಡ್ಡೆ ಮತ್ತು ಅಕ್ಕಮಹಾದೇವಿ ಅವರ ಮಕ್ಕಳಾದ ವಚನ ಮತ್ತು ವಿವೇಕ ಅವರಿಗೆ ಅಜ್ಜಿ ವಿಜಯಲಕ್ಷ್ಮಿ ಗಡ್ಡೆ ಲಿಂಗದೀಕ್ಷೆ ನೀಡಿರುವುದು ವಿಶೇಷವಾಗಿತ್ತು. ಬಳಿಕ ಅನುಭವ ಮಂಟಪದ ಅಧ್ಯಕ್ಷ ಭಾಲ್ಕಿ ಬಸವಲಿಂಗ ಪಟ್ಟದ್ದೇವರು ಮಾತನಾಡಿ ಗೃಹಸ್ಥರೇ ಲಿಂಗದೀಕ್ಷೆ ನೀಡಿರುವುದು ಕ್ರಾಂತಿಕಾರಿ ಹೆಜ್ಜೆಯಾಗಿದೆ. ಬಸವತತ್ವವೂ ಇದನ್ನೇ ಹೇಳುತ್ತದೆ. ಲಿಂಗಾಯತರು ಲಿಂಗಧರಿಸುವುದು ಅತ್ಯಂತ ಅವಶ್ಯಕ' ಎಂದರು.



ಉದ್ಯೋಗದಿಂದ ಕುಟುಂಬದ ಆರ್ಥಿಕತೆ ವೃದ್ಧಿ: ಭಂವರ್ಸಿಂಗ್ ಮೀನಾ

ಕಲಬುರಗಿ,ಜ.07-

ಕಲಬುರಗಿ ತಾಲ್ಲೂಕು ಪಂಚಾಯಿತಿ ಕಚೇರಿ ಆವರಣದಲ್ಲಿ ಸೋಮವಾರ ಆಯೋಜಿಸಲಾಗಿದ್ದ ಜಿಲ್ಲಾಮಟ್ಟದ ಉದ್ಯೋಗ ಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈ ಉದ್ಯೋಗ ಮೇಳದಲ್ಲಿ ರಾಜ್ಯದ ಮತ್ತು ಹೊರರಾಜ್ಯಗಳಿಂದ ಹಲವು ಉದ್ಯೋಗದಾತ ಕಂಪನಿಗಳು ಪಾಲ್ಗೊಂಡಿವೆ. ಜಿಲ್ಲೆ ಹಾಗೂ ನೆರೆಯ ಜಿಲ್ಲೆಗಳ 12,961 ಮಂದಿ ಕ್ಯೂಆರ್ ಕೋಡ್ ಮೂಲಕ ನೋಂದಣಿ ಮಾಡಿಕೊಂಡಿದ್ದಾರೆ. ಈ ಮೇಳದಲ್ಲಿ ಕೆಲಸ ಪಡೆಯುವಲ್ಲಿ ಹಿನ್ನಡೆ ಅನುಭಸಿದರೂ ಚಿಂತೆ ಬೇಡ. ಅವರಿಗೆ ಬೇರೆ-ಬೇರೆ ಸಂಸ್ಥೆಗಳ ಮೂಲಕ ಕೌಶಲ ತರಬೇತಿ ನೀಡಲು ಯೋಜನೆ ರೂಪಿಸಲಾಗುವುದು' ಎಂದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾ ನಿರ್ದೇಶಕ ಜಗದೇವ ಬಿ., ಜಿಲ್ಲಾ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇ ಶಕ ಅಬ್ದುಲ್ ಅಜೀಮ್, ಜಿಲ್ಲಾ ಕೌಶಲ ಅಭಿವೃದ್ಧಿ ಅಧಿಕಾರಿ ನಾಗುಬಾಯಿ ದೊಡ್ಡಮನಿ ಮಾತನಾಡಿದರು. ಎಸ್ಬಿಆರ್ ಸೆಟಿ ತರಬೇತಿ ಕೇಂದ್ರದ ನಿರ್ದೇಶಕ ನಂದಕಿಶೋರ ಮಳಖೇಡಕರ ಮಾತನಾಡಿ, ವಿವಿಧ ತರಬೇತಿಗಳ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಅಧಿಕಾರಿಗಳಾದ ವಿಕಾಸ ಸಜ್ಜನ್, ಪವನಕುಮಾರ, ಜಾಧವ, ತಾ.ಪಂ ಇಒ ಎಂ.ಡಿ.ಸೈಯದ್ ಪಟೇಲ್, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಲೋಹಿತಕುಮಾರ ಸೇರಿದಂತೆ ಹಲವರು ಇದ್ದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವ ನೋಪಾಯ ಇಲಾಖೆ, ರಾಷ್ಟ್ರೀಯ ಜೀವನೋಪಾಯ ಅಭಿಯಾನ, ದೀನ್ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ ಯೋಜನೆ ಹಾಗೂ ಕಲಬುರಗಿ ತಾಲ್ಲೂಕು ಪಂಚಾಯಿತಿ ಸಹಯೋಗದಲ್ಲಿ ಉದ್ಯೋಗ ಮೇಳ ಆಯೋಜಿಸಲಾಗಿತ್ತು.

ಜ್ಞಾನ ಸಂಪಾದನೆಯಿಂದ ಸಾಧನೆ ಸಾಧ್ಯ : ಸಚಿವ ಖಂಡ್ರೆ



ಬೀದರ್,ಜ.07-

ಪಟ್ಟಣದ ವೀರೇಂದ್ರ ಪಾಟೀಲ ಪಬ್ಲಿಕ್ ಶಾಲೆಯ 24ನೇ ವಾರ್ಷಿಕೋತ್ಸವವನ್ನು ಭಾನುವಾರ ಉದ್ಘಾಟಿಸಿದ ಅವರು, ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಈ ಭಾಗದಲ್ಲಿ ಶೈಕ್ಷಣಿಕ ಬದಲಾವಣೆಗೆ ಕಾರಣವಾಗಿರುವ ವೀರೇಂದ್ರ ಪಾಟೀಲ ಪಬ್ಲಿಕ್ ಶಾಲೆ ಹಾಗೂ ಪಿಯು ವಿಜ್ಞಾನ ಮಹಾವಿದ್ಯಾಲಯಗಳು ಹಿಂದುಳಿದ ಗಡಿ ಭಾಗದ ವಿದ್ಯಾರ್ಥಿಗಳಿಗೆ ಕಾಮಧೇನು, ಕಲ್ಪವೃಕ್ಷವಾಗಿದೆ' ಎಂದು ಶ್ಲಾಘಿಸಿದರು.

ಕಲ್ಯಾಣ ಕರ್ನಾಟಕ ಪ್ರದೇಶ ಸಾಂಸ್ಕೃತಿಕ ಮತ್ತು ಅಧ್ಯಾತ್ಮಿಕವಾಗಿ ಬಹಳ ಮುಂದುವರಿದಿದೆ. ಆದರೆ, ಶೈಕ್ಷಣಿಕ, ಸಾಮಾಜಿಕ ಹಾಗೂ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಒಂದು ಕಾಲದಲ್ಲಿ ಕಲಬುರಗಿ, ಬೀದರ್ ಜಿಲ್ಲಾ ಕೇಂದ್ರಗಳಿಗೆ ಸೀಮಿತವಾಗಿದ್ದ ಶಿಕ್ಷಣ ಇಂದು ಗ್ರಾಮೀಣ ಪ್ರದೇಶಕ್ಕೂ ಪಸರಿಸಿದೆ' ಎಂದರು.

ನಿವೃತ್ತ ಪ್ರಾಧ್ಯಾಪಕಿ ಶಾರದಾಬಾಯಿ ಸುಭಾಷ ರಾಠೋಡ್ ಮಾತನಾಡಿ, ಚಿಂಚೋಳಿಯಂತಹ ಹಿಂದುಳಿದ ಪ್ರದೇಶದಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಅತಿಕಡಿಮೆ ಶುಲ್ಕ ಪಡೆದು ಕೇಂದ್ರೀಯ ಮಂಡಳಿಯ ಪಠ್ಯಕ್ರಮದ ಶಾಲೆ ತೆರೆದು ಜನಸೇವೆಯಲ್ಲಿ ತೊಡಗಿದ ಮಾಜಿ ಶಾಸಕ ಕೈಲಾಸ ವೀರೇಂದ್ರ ಪಾಟೀಲ ಅವರ ಸಾಮಾಜಿಕ ಕಾಳಜಿ ಶ್ಲಾಘನೀಯ' ಎಂದು ಹೇಳಿದರು.


ಮುಗುಳ ನಾಗಾವಿ ಕಟ್ಟಿಮಠದ ಅಭಿನವ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಉದ್ಯಮಿ ರವಿ ಸಹುಕಾರ ತಂಬಾಕೆ, ಕ್ಷೇತ್ರ ಶಿಕ್ಷಣಾಧಿಕಾರಿ ವಿ. ಲಕ್ಷ್ಮಯ್ಯ, ಅಭಿನ ಂದನ ಪಾಟೀಲ, ಮಹೇಮೂದ್ ಪಟೇಲ್ ಹಾಗೂ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು ಇದ್ದರು.

ಅಧ್ಯಕ್ಷತೆ ವಹಿಸಿದ್ದ ಕೈಲಾಸ ವೀರೇಂದ್ರ ಪಾಟೀಲ ಮಾತನಾಡಿ, 24 ವರ್ಷಗಳ ಹಿಂದೆ ಸ್ಥಾಪನೆಯಾದ ನಮ್ಮ ಸಂಸ್ಥೆ ಹೆಮ್ಮರವಾಗಿ ಬೆಳೆಯಲು ಪಾಲಕರ ಸಹಕಾರ ಮುಖ್ಯವಾಗಿದೆ. ನಮ್ಮ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ವೈದ್ಯರು, ಎಂಜಿನೀಯರ, ಕೃಷಿಕರು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡುತ್ತ ಸ್ವಾವಲಂಬಿ ಬದುಕು ಸಾಗಿಸುತ್ತಿದ್ದಾರೆ' ಎಂದರು.

ಉಪಾಧ್ಯಕ್ಷ ಬಸವರಾಜ ಮಾಲಿ ಶಿಕ್ಷಣ ಸಂಸ್ಥೆ ನಡೆದು ಬಂದ ದಾರಿ ವಿವರಿಸಿದರು. ಶಿವಕುಮಾರ ಪೋಲಕಪಳ್ಳಿ ನಿರೂಪಿಸಿದರು. ಅಬ್ರಾಹ್ಮ ಥಾಮಸ್ ಅತಿಥಿಗಳನ್ನು ಪರಿಚಯಿಸಿದರು. ವಿಶ್ವನಾಥ ನಾಯನೂರು ವಂದಿಸಿದರು.

ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮದ 1ರಿಂದ 10 ತರಗತಿಯ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು.

ನಾನು ಎಂಎಲ್ಎ ಆಗಿದ್ದಾಗ ಶಾಸಕ ಸಿದ್ದು ಪಾಟೀಲ್ ನಮ್ಮ ಬಾಗಿಲು ಕಾಯುತ್ತಿದ್ದರು : ರಾಜಶೇಖರ ಪಾಟೀಲ್



ಹುಮನಾಬಾದ್,ಜ.07-

ನನ್ನಿಂದ ನೀವು ಎಂಎಲ್ಎ ಆಗಿದ್ದೀರಿ ಎಂಬ ಶಾಸಕ ಸಿದ್ದು ಪಾಟೀಲ್ ಹೇಳಿಕೆಗೆ ತೀವ್ರವಾಗಿ ಪ್ರತಿಕ್ರಿಯಿಸಿದ ಮಾಜಿ ಸಚಿವ ರಾಜಶೇಖರ ಪಾಟೀಲ್, ನಾನು ಎಂಎಲ್ಎ ಆಗಿದ್ದಾಗ ಸಿದ್ದು ಪಾಟೀಲ್ ನಮ್ಮ ಮನೆಯ ಬಾಗಿಲು ಕಾಯುತ್ತಿದ್ದವರು ಎಂದು ತಿಳಿಸಿದ್ದಾರೆ.

ಮಂಗಳವಾರ ತಮ್ಮ ಗೃಹ ಕಚೇರಿಯಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಕೆಡಿಪಿ ಸಭೆಯಲ್ಲಿ ಗಲಾಟೆ ನಡೆದ ಸಂದರ್ಭದಲ್ಲಿ ನಾನು ಮೈಸೂರಿಗೆ ತಾಯಿ ಚಾಮುಂಡೇಶ್ವರಿ ದರ್ಶನಕ್ಕೆ ಹೋಗಿದ್ದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರುವ ಮಾಹಿತಿ ತಿಳಿದ ನಂತರ ಏರ್ಪೋರ್ಟ್‌ಗೆ ತೆರಳಿದ್ದೆ. ಅಲ್ಲಿ ಈ ಭಾಗದ ಘಟನೆ ಕುರಿತು ಕರೆ ಬಂದ ತಕ್ಷಣವೇ ವಿಮಾನದ ಮೂಲಕ ಹೈದರಾಬಾದ್ ಮಾರ್ಗವಾಗಿ ವಾಪಸ್ಸಾಗಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಶಾಸಕ ಸಿದ್ದು ಪಾಟೀಲ್ ಅವರು ಹುಮನಾಬಾದ್ನಲ್ಲಿ ಪದೇಪದೇ ಗುಂಡಾ ವರ್ತನೆ ತೋರಿಸುತ್ತಿದ್ದು, ಯಾವುದೇ ಕಾರ್ಯಕ್ರಮದಲ್ಲಾದರೂ ದಮ್ಮು-ತಾಕತ್ತು ಎಂಬ ಭಾಷೆ ಬಳಸುತ್ತಿದ್ದಾರೆ ಎಂದು ಆರೋಪಿಸಿದರು.

ಭೂಮಿ ಪೂಜೆ ಅಥವಾ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಿ, ಶಾಸಕರು ದಿನಾಂಕ ನಿಗದಿಪಡಿಸಿದರೆ ಕನಿಷ್ಠ ಏಳು ದಿನಗಳ ಮುಂಚಿತವಾಗಿ ಅಧಿಕಾರಿಗಳು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಮಾಹಿತಿ ನೀಡಬೇಕು ಎಂಬ ಪ್ರೊಟೋಕಾಲ್ ಇದೆ. ಆದರೆ ಇದನ್ನು ಸಿದ್ದು ಪಾಟೀಲ್ ನಿರಂತರವಾಗಿ ಉಲ್ಲಂಘಿಸುತ್ತಿದ್ದಾರೆ ಎಂದು ದೂರಿದರು.

ಚಿಟಗುಪ್ಪಾ ಪಟ್ಟಣದಲ್ಲಿ ಯಾವುದೇ ಪ್ರೊಟೋಕಾಲ್ ಪಾಲಿಸದೇ ತಮ್ಮ ಕಾರಲ್ಲೇ ಸಬ್ಬಲ್ ತೆಗೆದುಕೊಂಡು ಗುದ್ದಲಿ ಪೂಜೆಗೆ ಮುಂದಾದರು. ಇದನ್ನು ನಮ್ಮ ಕಾರ್ಯಕರ್ತರು ವಿರೋಧಿಸಿದಾಗ, ಪಿಎಸ್ಐಗೆ ಏಕವಚನದಲ್ಲಿ ಮಾತನಾಡಿ ಬೆದರಿಕೆ ಹಾಕಿದ್ದಾರೆ. ನಾನು 18 ವರ್ಷ ಶಾಸಕನಾಗಿ ಆಡಳಿತ ನಡೆಸಿದರೂ, ಯಾವ ಅಧಿಕಾರಿಯ ಮೇಲೂ ಇಂತಹ ದಬ್ಬಾಳಿಕೆ ನಡೆಸಿಲ್ಲ ಎಂದು ಹೇಳಿದರು.

ಸಿದ್ದು ಪಾಟೀಲ್ ಶಾಸಕರಾಗಲು ಯೋಗ್ಯರಲ್ಲ ಎಂದು ಟೀಕಿಸಿದ ಅವರು, ಹಿಂದೆ ಇವರು ಸಾರಾಯಿ ಪಾಕೆಟ್ ಮಾರಾಟ ಮಾಡುತ್ತಿದ್ದರು. ಈ ಕುರಿತು ಅವರ ಗೆಳೆಯನೇ ಹೇಳಿರುವ ವಿಡಿಯೋ ದಾಖಲೆಗಳಿವೆ. ನಾನು ಶಾಸಕ ಹಾಗೂ ಸಚಿವನಾಗಿದ್ದಾಗ ನನ್ನ ಬಳಿ ಕೆಲಸ ಮಾಡಿ ಬೆಳೆದ ವ್ಯಕ್ತಿಯೇ ಇವರು. ನಾನು ಬೆಂಗಳೂರಿಗೆ ಹೋಗುವ ಮೊದಲು ಇವರೂ ಅವರ ಸಹೋದರರೂ ಶಾಸಕರ ಭವನಕ್ಕೆ ಹೋಗಿ ನನಗಾಗಿ ಕಾಯುತ್ತಿದ್ದರು. ಇವರು ನನಗೆ ಶಾಸಕ ಮಾಡುತ್ತಾರೆ ಎನ್ನುವುದು ನಗಣೀಯ ಮಾತು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶಿಕ್ಷಕರ ಭವನ ನಿರ್ಮಾಣಕ್ಕೆ ನಿವೇಶನ ಮಂಜೂರು: ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಅಭಿನಂದನೆ

ಕಲಬುರಗಿ,ಜ.07-

ಜಿಲ್ಲೆಯ ಪ್ರೌಢಶಾಲಾ ಶಿಕ್ಷಕರ ಬಹುಕಾಲದ ಬೇಡಿಕೆಯಾಗಿದ್ದ ಶಿಕ್ಷಕರ ಭವನ ನಿರ್ಮಾಣಕ್ಕೆ ಅಗತ್ಯವಿರುವ ನಿವೇಶನವನ್ನು ರಿಯಾಯಿತಿ ದರದಲ್ಲಿ ಲೀಸ್ಗೆ ನೀಡಲು ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿರುವ ಹಿನ್ನೆಲೆಯಲ್ಲಿ, ಜಿಲ್ಲೆಯ ಪ್ರೌಢಶಾಲಾ ಶಿಕ್ಷಕರ ನಿಯೋಗವು ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಧನ್ಯವಾದ ಸಲ್ಲಿಸಿದೆ.

ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯ ಶೇಖರೋಜಾ ಸರ್ವೆ ನಂ.111/2ರಲ್ಲಿ ಇರುವ 25,166 ಚದರ ಅಡಿ ಸಿ.ಎ. ನಿವೇಶನವನ್ನು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾ ಘಟಕ, ಕಲಬುರಗಿಗೆ 30 ವರ್ಷಗಳ ಅವಧಿಗೆ ರಿಯಾಯಿತಿ ದರದಲ್ಲಿ ಲೀಸ್ ನೀಡಲು ಜ.2ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

ಶಿಕ್ಷಕರ ಶೈಕ್ಷಣಿಕ ಹಾಗೂ ಸಂಘಟನಾ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಶಿಕ್ಷಕರ ಭವನ ನಿರ್ಮಾಣಕ್ಕಾಗಿ ನಿವೇಶನ ಒದಗಿಸಲು ವಿಶೇಷ ಮುತುವರ್ಜಿ ವಹಿಸಿ, ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರಕಿಸಿಕೊಟ್ಟ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿ-ಬಿಟಿ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರಿಗೆ ಶಿಕ್ಷಕರ ಸಂಘದ ಪದಾಧಿಕಾರಿಗಳು ಕೃತಜ್ಞತೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ನಿವೇಶನ ಮಂಜೂರಿಗೆ ಪರೋಕ್ಷವಾಗಿ ಬೆಂಬಲ ನೀಡಿದ ಕಲಬುರಗಿ ದಕ್ಷಿಣ ಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ್, ಜೆಸ್ಕಾಂ ಅಧ್ಯಕ್ಷ ಪ್ರವೀಣ್ ಪಾಟೀಲ್ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜರ್ಹ ಆಲಂ ಖಾನ್ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಶಿಕ್ಷಕರ ಸಂಘದ ಪದಾಧಿಕಾರಿಗಳು ಧನ್ಯವಾದ ಸಲ್ಲಿಸಿದರು.



ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹೇಶ್ ಹೂಗಾರ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ ಬಳುಂಡಗಿ, ಶಿಕ್ಷಕರ ಸಂಘದ ಕಾರ್ಯದರ್ಶಿಗಳಾದ ಜಮೀಲ್ ಮತ್ತು ಇಮ್ರಾನ್ ಅಹಮದ್, ಪದಾಧಿಕಾರಿಗಳಾದ ರಾಜೇಶ್ ನೀಲಹಳ್ಳಿ, ಮಲ್ಲಿಕಾರ್ಜುನ ಸಲಗರ, ರಾಘವೇಂದ್ರ ರೆಡ್ಡಿ, ಮೊಹಮ್ಮದ್ ರಫೀಕ್, ದೇವೇಂದ್ರ ಬಿರಾದಾರ, ಚನ್ನಬಸಪ್ಪ ಬಿರಾದಾರ, ಬಾಷಾ ಪಟೇಲ್, ರೇಣುಕಾ ಡಾಂಗೆ, ಭಾಗ್ಯಲಕ್ಷ್ಮಿ ಗಿರೇಗೋಳ ಸೇರಿದಂತೆ ನೌಕರರ ಸಂಘದ ಪದಾಧಿಕಾರಿಗಳಾದ ಚಂದ್ರಕಾಂತ ಏರಿ, ಧರ್ಮರಾಯ ಜವಳಿ, ಎಂ.ಬಿ. ಪಾಟೀಲ್, ಸಂತೋಷ್ ಗಂಗೂ ಹಾಗೂ ಜಿಲ್ಲೆಯ ಎಲ್ಲಾ ತಾಲೂಕುಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಪದಾಧಿಕಾರಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದರು.

ಬಾಗಲಕೋಟೆ: ಅಂಗನವಾಡಿ ಮೇಲ್ವಿಚಾರಕರ ಕಾರ್ಯಕ್ಕೆ ಅಸಮಾಧಾನ



ಬಾಗಲಕೋಟೆ,ಜ.07-

ಜಿಲ್ಲಾಡಳಿತ ಭವನದ ಆರೋಗ್ಯ ಇಲಾಖೆ ಸಭಾಭವನದಲ್ಲಿ ಸೋಮವಾರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಹಾಜರಾತಿ ವಾಸ್ತವ ಸ್ಥಿತಿಗೆ ಅನುಗುಣವಾಗಿ ಇರುವುದಿಲ್ಲ. ಪೋಷಣ್ ಟ್ರ್ಯಾಕ್ ಹಾಜರಾತಿ ಪರಿಶೀಲಿಸಿದಾಗ ನೂರರಷ್ಟು ಹಾಜರಾತಿ ಇರುತ್ತದೆ. ಇದನ್ನು ನೋಡಿದಾಗ ನಿರ್ವಹಣೆಯಲ್ಲಿ ಲೋಪ ಕಂಡು ಬರುತ್ತದೆ ಎಂದರು.

ಮಕ್ಕಳ ಹಾಜರಾತಿ ಬಗ್ಗೆ ಮೇಲ್ವಿಚಾರಕಿಯರಿಗೆ ತಿಳಿದಿದ್ದರೂ ಸುಧಾರಣೆ ಮಾಡುವಲ್ಲಿ ವಿಫಲರಾಗಿದ್ದಾರೆ. ಇಂತಹ ಮನಸ್ಥಿತಿಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಮೇಲ್ವಿಚಾರಕರು ತಮ್ಮ ಮೇಲಿರುವ ಜವಾಬ್ದಾರಿ ಅರಿತು ಅಂಗನವಾಡಿ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಶಿಸ್ತುಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು.

ಜಿಲ್ಲೆಯಲ್ಲಿ ಬಾಡಿಗೆ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳು ನಡೆಯುತ್ತಿದ್ದು, ಸ್ವಂತ ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ನಿವೇಶನ ಗುರುತಿಸಿರುವ ಬಗ್ಗೆ ಪರೀಶೀಲಿಸಲಾಗಿ ಜಿಲ್ಲೆಯಲ್ಲಿ 545 ಅಂಗನವಾಡಿಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ.

ಅದರಲ್ಲಿ ನಗರದ ಪ್ರದೇಶದಲ್ಲಿ 396, ಗ್ರಾಮೀಣ ಭಾಗದಲ್ಲಿ 149 ಇವೆ. ಬಾಗಲಕೋಟೆ ನಗರಕ್ಕೆ ಸಂಬಂಧಿ ಸಿದಂತೆ 12 ಬಾಡಿಗೆಯಲ್ಲಿದ್ದು, 8ಕ್ಕೆ ನಿವೇಶನ ಪಡೆಯಲಾಗಿದೆ. ಹಳೆ ನಗರದಲ್ಲಿ ಮುಳುಗಡೆ ಪ್ರದೇಶ ವಿರುವದರಿಂದ ನಿವೇಶನ ಗುರು ತಿಸಲು ಸಾಧ್ಯವಾಗುತ್ತಿಲ್ಲ ಎಂದು ಮೇಲ್ವಿಚಾರಕಿ ವೀಣಾ ಸಭೆಗೆ ತಿಳಿದರು.

ಹುನಗುಂದಲ್ಲಿ ಆರು ಸಿಎ ನಿವೇಶನ, ಇಳಕಲ್ಲಲ್ಲಿ 11 ಸಿಎ ನಿವೇಶನ ಗುರುತಿಸಲಾಗಿದೆ. ಮಾರ್ಚ್ ಒಳಗಾಗಿ ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿಗಳಿಗ ಸ್ವಂತ ಕಟ್ಟಡ ನಿರ್ಮಾಣಕ್ಕೆ ಸೂಕ್ತ ನಿವೇಶನ ಗುರುತಿಸಿದಲ್ಲಿ ಹಸ್ತಾಂತರಕ್ಕೆ ಕ್ರಮಕೈಗೊಳ್ಳಲು ಸಾಧ್ಯವಾಗುತ್ತದೆ. ಅಂಗನವಾಡಿ ಕೇಂದ್ರಗಳ ಫಲಾನುಭವಿಗಳ ವಿವರ, ಮೂಲಸೌಕರ್ಯ, ಮಕ್ಕಳ ತೂಕ ಮತ್ತು ಅಪೌಷ್ಟಿಕ ಮಕ್ಕಳ ಮಾಹಿತಿ ಬಗ್ಗೆ ಚರ್ಚೆ ನಡೆಸಿದರು.

ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ ಎನ್.ವೈ. ಬಸರಿಗಿಡದ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಪ್ರಭಾಕರ ಇದ್ದರು.



ಹಂಪಿ ಏಕಗವಾಕ್ಷಿ ವ್ಯಾಪ್ತಿಗೆ ಬಂದರಷ್ಟೇ ಅಭಿವೃದ್ಧಿ

ವಿಜಯನಗರ,ಜ.07-

ಹಂಪಿಯಲ್ಲಿ ಎರಡು ದಿನ ಪ್ರವಾಸ ಮಾಡಿದ ಸಚಿವರು ಮಂಗಳವಾರ ಹಂಪಿ ಹೆರಿಟೇಜ್ ರೆಸಾರ್ಟ್ನಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳ ಜತೆಗೆ ನಡೆಸಿದ ಸಭೆಯಲ್ಲಿ ಅವರು ಇದನ್ನು ತಿಳಿಸಿದರು. ಸೋಮವಾರ ಸಂಜೆ ಸ್ಥಳೀಯ ಶಾಸಕ ಎಚ್.ಆರ್.ಗವಿಯಪ್ಪ ಅವರೊಂದಿಗೆ ಸುದೀರ್ಘ ನಡೆಸಿದ್ದರು.

ಅಂತರರಾಷ್ಟ್ರೀಯ ಖ್ಯಾತಿಯ ವಾಸ್ತು ವಿನ್ಯಾಸಕಾರ ದಿವಾಕರ್ ಅವರು ಶಾಸಕರ ಸಮ್ಮುಖದಲ್ಲಿ ಸಚಿವರಿಗೆ ಹಂಪಿಯನ್ನು ಹೇಗೆ ಅಭಿವೃದ್ಧಿಪಡಿಸಬಹುದು ಎಂಬುದನ್ನು ತ್ರಿಡಿ ವಿನ್ಯಾಸದ ಮೂಲಕ ತೋರಿಸಿಕೊಟ್ಟರು. ಇದರಿಂದ ಪ್ರಭಾವಿತರಾದ ಸಚಿವ ಶೆಖಾವತ್, ಯೋಜನೆ ಚೆನ್ನಾಗಿದೆ, ಆದರೆ ಇಲ್ಲಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಕೊರತೆಯಿಂದ ಅಡ್ಡಿ ವಿಪರೀತವಾಗಿದೆ. ಹೀಗಾಗಿ ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ಬರಬೇಕು. ಶಾಸಕರೇ ಇಲ್ಲಿ ವಿವಿಧ ಇಲಾಖೆಗಳ ನಡುವೆ ಹಾಗೂ ರಾಜ್ಯ, ಕೇಂದ್ರಗಳ ಜತೆಗೆ ಕೊಂಡಿಯಾಗಿ ನಿಂತು ಕೆಲಸ ಮಾಡಬೇಕು. ಜಿಲ್ಲಾಧಿಕಾರಿ ಅವರು ಏಕಗವಾಕ್ಷಿಗೆ ವ್ಯವಸ್ಥೆ ಮಾಡಬೇಕು' ಎಂದು ಸೂಚಿಸಿದರು.

ಸಮರ್ಪಕ, ಸಮನ್ವಯದಿಂದ ಕೂಡಿದ ಯೋಜನೆಯನ್ನು ಕೇಂದ್ರದ ಮುಂದೆ ಒಂದು ತಿಂಗಳೊಳಗೆ ತಂದರೆ, ಎರಡು ವರ್ಷದ ಒಳಗೆ ಅದನ್ನು ಜಾರಿ ತರುತ್ತೇನೆ' ಎಂದು ಭರವಸೆ ನೀಡಿದರು.

ಹೋಟೆಲ್ ಉದ್ಯಮಿಗಳ ಸಭೆ: ಸಚಿವ ಶೆಖಾವತ್ ಅವರು ಮಂಗಳವಾರ ನಗರದ ಹೋಟೆಲ್ ಉದ್ಯಮಿಗಳ ಜತೆಗೂ ಮಾತುಕತೆ ನಡೆಸಿದರು. ಹಂಪಿ ಪ್ರವಾಸೋದ್ಯಮ ಉತ್ತೇಜನಕ್ಕೆ ಪ್ರತ್ಯೇಕ ವಿಮಾನ ನಿಲ್ದಾಣ, ವಿಶ್ವದರ್ಜೆಯ ರೈಲು ನಿಲ್ದಾಣ, ಹೆರಿಟೇಜ್ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಹಲವು ವಿಶೇಷ ರೈಲುಗಳ ಓಡಾಟಗಳಂತಹ ಸಲಹೆಗಳನ್ನು ನೀಡಿದರು ಎಂದು ಮೂಲಗಳು ತಿಳಿಸಿವೆ.

ಹಂಪಿ ಎಂಬುದು ಒಂದು ಚಾರಿತ್ರಿಕ ಧಾರ್ಮಿಕ ತಾಣ. ಇದು ಪಿಕ್ನಿಕ್ ಜಾಗ ಅಲ್ಲ. ಹೀಗಾಗಿ ಇಲ್ಲಿನ ಇತಿಹಾಸ ಧಾರ್ಮಿಕ ಮಹತ್ವಗಳನ್ನು ತಿಳಿದುಕೊಂಡು ಯಾವ ಒಂದು ಕ್ಷೇತ್ರಕ್ಕೂ ಧಕ್ಕೆ ಬರದ ರೀತಿಯಲ್ಲಿ ಸುಸ್ಥಿರ ಅಭಿವೃದ್ಧಿಯ ಯೋಜನೆ ರೂಪಿಸಿ ಒಂದು ತಿಂಗಳೊಳಗೆ ರಾಜ್ಯದ ಮೂಲಕ ಕೇಂದ್ರಕ್ಕೆ ಸಲ್ಲಿಸಿ' ಎಂದು ಸಚಿವ ಶೆಖಾವತ್ ತಿಳಿಸಿದರು. ಹಂಪಿಯ ಹೃದಯ ಭಾಗದಲ್ಲಿ (ಕೋರ್) ಯಾವುದೇ ನಿರ್ಮಾಣ ಕಾರ್ಯ ಮಾಡುವಂತಿಲ್ಲ. ಪ್ರವಾಸಿಗರಿಗೆ ಸೌಲಭ್ಯ ಕಲ್ಪಿಸುವಾಗ ಸ್ಮಾರಕಗಳಿಗೆ ಧಕ್ಕೆ ಆಗದ ರೀತಿಯಲ್ಲೇ ಅದನ್ನು ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು. ಇಂತಹ ಸಮನ್ವಯ ಕಾರ್ಯದಲ್ಲಿ ಸಹಕರಿಸದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ನಿಶ್ಚಿತ ಎಂದು ಎಚ್ಚರಿಸಿದರು.

ಒಗ್ಗೂಡಿದರಷ್ಟೇ ರಾಜಕೀಯ ಶಕ್ತಿ ಸಾಧ್ಯ : ಗೋಪಾಲರಾವ್ ಕಟ್ಟಿಮನಿ



ಕಲಬುರಗಿ,ಜ.07-

ನಗರದ ಡಾ.ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಸೋಮ ವಾರ ಆಯೋಜಿಸಿದ್ದ ಸಮು ದಾಯದ ಆನ್ಲೈನ್ ಸದಸ್ಯತ್ವ ಅಭಿಯಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಕೆಲವು ಸಮುದಾಯಗಳು ಅಧಿಕಾರವನ್ನು ತಮ್ಮ ಮುಷ್ಠಿಯಲ್ಲಿ ಇಟ್ಟುಕೊಂಡಿವೆ. ನಾವು 45 ಲಕ್ಷಕ್ಕೂ ಹೆಚ್ಚು ಜನರಿದ್ದೇವೆ. ಆದರೆ, ಶಕ್ತಿಯೇ ಇಲ್ಲ. ನಮ್ಮವರು ಎಷ್ಟು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಲ್ಲಿ ಸದಸ್ಯರಿದ್ದಾರೆ? ಯಾವುದೇ ಪಕ್ಷವೂ ನಮಗೆ ಸುಲಭಕ್ಕೆ ಅವಕಾಶ ನೀಡಲ್ಲ. ಯಾಕೆ ಎಂಬುದರ ಆತ್ಮಾವಲೋಕನ ಅಗತ್ಯ' ಎಂದರು.

21ನೇ ಶತಮಾನದಲ್ಲಿ ರಾಜಕೀಯ ಶಕ್ತಿ ಮಹತ್ವ ಪಡೆದಿದೆ. ಇದಕ್ಕಾಗಿ ನಾವೆಲ್ಲ ಒಡಕು ಬಿಟ್ಟು ಸಂಘಟಿತರಾಗಿ ಒಗ್ಗಟ್ಟು ಪ್ರದರ್ಶಿಸಬೇಕು. ಆಗಷ್ಟೇ ರಾಜಕೀಯ ಶಕ್ತಿ ಪಡೆಯಲು ಸಾಧ್ಯ. ನಮ್ಮ ಸಮುದಾಯದವರು ಹಣಕ್ಕೆ ಮತ ಹಾಕದೇ ಸಮಾಜಕ್ಕಾಗಿ ಮತ ಹಾಕಬೇಕು' ಎಂದರು.

ನಮ್ಮ ಸಮುದಾಯದ ಶಕ್ತಿಯನ್ನು ಅರಿಯಲು ಆನ್ಲೈನ್ ನೋಂದಣಿ ನಡೆಸಲಾಗುತ್ತಿದೆ. ಇದು ಪಕ್ಷಾತೀತವಾಗಿ ನಮ್ಮ ಸಮುದಾಯದ ಮುಖಂಡರು ಕೈಗೊಂಡ ನಿರ್ಧಾರ. ಜಿಲ್ಲೆಯಲ್ಲಿ 25 ಸಾವಿರ ಸದಸ್ಯತ್ವ ನೋಂದಣಿಯ ಗುರಿ ಹೊಂದಲಾಗಿದೆ' ಎಂದರು.

ಮುಖಂಡರಾದ ವಿಜಯಕುಮಾರ ಜಿ.ರಾಮಕೃಷ್ಣ, ಚಂದ್ರಿಕಾ ಪರಮೇಶ್ವರಿ, ಶಾಮ ನಾಟೀಕರ, ಲಿಂಗರಾಜ ತಾರಫೈಲ್, ರಾಜು ವಾಡೇಕರ, ಮಲ್ಲಿಕಾರ್ಜುನ ದಿನ್ನಿ ಸೇರಿದಂತೆ ಹಲವರು ಮಾತನಾಡಿದರು.

ಒಂದನೇಯ ಪುಟದಿಂದ

ರಾಯಚೂರು ಜಿಲ್ಲೆಯಲ್ಲಿ ಲೋಕಾಯುಕ್ತ ದಾಳಿ: ಸರ್ಕಾರಿ ಕಚೇರಿಗಳ ತಪಾಸಣೆ: ಗಂಭೀರ ಲೋಪಗಳ ಪತ್ತೆ
ತಪ್ಪಿತಸ್ಥ ಅಧಿಕಾರಿಗಳಿಗೆ ನೋಟಿಸ್ - ತನಿಖೆ, ಕ್ರಿಮಿನಲ್ ಕ್ರಮದ ಎಚ್ಚರಿಕೆ

ಪತ್ತೆಯಾಗಿದ್ದು, ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಲೋಕಾಯುಕ್ತರು ಅಸಮಾಧಾನ ವ್ಯಕ್ತಪಡಿಸಿದರು. ಪಾಲಿಕೆಯಲ್ಲಿ ಅನಧಿಕೃತ ಕಟ್ಟಡಗಳ ಕುರಿತು ಯಾವುದೇ ಕಡತಗಳಿಲ್ಲದಿರುವುದು, ಇ-ಖಾತಾ ಅರ್ಜಿಗಳು ನೂರಾರು ಸಂಖ್ಯೆಯಲ್ಲಿ ಬಾಕಿ ಉಳಿದಿರುವುದು, ಘನ ತ್ಯಾಜ್ಯ ವಿಲೇವಾರಿ ಹಾಗೂ ವಾಹನ ನಿರ್ವಹಣೆಯಲ್ಲಿ ಅಕ್ರಮಗಳು ಕಂಡುಬಂದಿವೆ. ತಹಶೀಲ್ ಕಚೇರಿಗಳಲ್ಲಿ ಪಹಣಿ ತಿದ್ದುಪಡಿ, ಸಿಂಧುತ್ವ, ಆರ್‌ಟಿಐ ಅರ್ಜಿಗಳು ವರ್ಷಗಳಿಂದ ವಿಲೇವಾರಿಯಾಗದೇ ಬಾಕಿ ಉಳಿದಿವೆ. ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಸಕಾಲ ನಿಯಮ ಉಲ್ಲಂಘನೆ, ಅಕ್ರಮ ಬಡಾವಣೆಗಳ ವಿರುದ್ಧ ಕ್ರಮವಿಲ್ಲದಿರುವುದು ಬಹಿರಂಗವಾಗಿದೆ. ಜಿಲ್ಲಾಧಿಕಾರಿ ನಿತೀಶ್ ಕೆ. ಅವರು, ಲೋಕಾಯುಕ್ತರು ಸೂಚಿಸಿದ ಎಲ್ಲಾ ಲೋಪಗಳನ್ನು ತಕ್ಷಣ ಸರಿಪಡಿಸಿ, ಮುಂದಿನ ವಾರ ಎಲ್ಲಾ ಇಲಾಖಾ ಅಧಿಕಾರಿಗಳ ಸಭೆ ಕರೆದು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಲೋಕಾಯುಕ್ತರ ಭೇಟಿ ಇಲ್ಲಿಗೆ ಮುಗಿಯುವುದಿಲ್ಲ; ಮುಂದಿನ ದಿನಗಳಲ್ಲಿ ನೋಟಿಸ್ಗಳು ಹಾಗೂ ಕಠಿಣ ಕ್ರಮಗಳು ಅನಿವಾರ್ಯ ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಯಿತು.

ಲೋಕಾಯುಕ್ತದಲ್ಲಿ ದೂರುಗಳ ಪ್ರಮಾಣ ಹೆಚ್ಚುತ್ತಿರುವುದು
ದುರದೃಷ್ಟಕರ: ಲೋಕಾಯುಕ್ತರ ಕಾರ್ಯದರ್ಶಿ ಶ್ರೀನಾಥ ಕೆ ಕಳವಳ

ಘಟಕಗಳು ಮಾತ್ರ ಸುಸ್ಥಿತಿಯಲ್ಲಿವೆ. 155 ಘಟಕಗಳು ನಿಷ್ಕ್ರಿಯವಾಗಿದ್ದು, ಈ ಬಗ್ಗೆ ಸಂಬಧಿಸಿದ ಅಧಿಕಾರಿಗಳು ವರದಿ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ನಾಯಿಗಳ ಹಾವಳಿ ತಡೆಗೆ ಕ್ರಮವಹಿಸಿ: ಸಾರ್ವಜನಿಕ ಸ್ಥಳಗಳಲ್ಲಿ ಬೀದಿನಾಯಿಗಳ ಹಾವಳಿ ನಿಯಂತ್ರಿಸಲೇಬೇಕು ಎಂದು ಸುಪ್ರೀಂ ಕೋರ್ಟ್ ಕಟ್ಟುನಿಟ್ಟಿನ ಸೂಚನೆ ನೀಡಿದಾಗ್ಯೂ ರಾಯಚೂರು ನಗರ ಸೇರಿದಂತೆ ಸಿಂಧನೂರ, ಮಾನವಿ, ಲಿಂಗಸೂರು, ದೇವದುರ್ಗ, ಮಸ್ಕಿ, ಸಿರವಾರ, ಅರಕೇರಾ ಯಾವುದೆ ಕಡೆಗಳಲ್ಲಿ ಏನೂ ಕ್ರಮಗಳಾಗದೇ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಅಧಿಕಾರಿಗಳು ಸುಮ್ಮನಿದ್ದು, ಈ ಬಗ್ಗೆ ಕೂಡಲೇ ಕ್ರಮ ಜರುಗಿಸಿ ವಿವರವಾದ ವರದಿ ನೀಡವೇಕು ಎಂದು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಬಯಲುಶೌಚ ಮುಕ್ತ ಜಿಲ್ಲೆಯಾಗಲಿ: ಈಗಲು ರೋಡ್ ಪಕ್ಕ ಕುಳಿತು ಬಯಲು ಶೌಚ ಮಾಡುವ ಪರಿಸ್ಥಿತಿ ರಾಯಚೂರು ಸೇರಿದಂತೆ ಈ ಭಾಗದ ಜಿಲ್ಲೆಗಳಲ್ಲಿ ಕಾಣುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಶೌಚಾಲಯ ಪರಿಸ್ಥಿತಿಯ ಚಿತ್ರಣ ಸಿಕ್ಕಿಲ್ಲ. ಸಿಇಓ ಅವರಿಂದ ಮಾಹಿತಿ ಪಡೆದು ಪರಿಶೀಲಿಸುತ್ತೇವೆ ಎಂದು ಅವರು ತಿಳಿಸಿದರು.

ಚೆಕ್‌ಪೋಸ್ಟಗಳ ಮೇಲೆ ನಿಗಾ: ಬೀದರ ಜಿಲ್ಲೆಯ ಹುಮನಾಬಾದ್ ಬಳಿಯ ಚೆಕ್‌ಪೋಸ್ಟ್ ಮೂಲಕ ಸಂಚರಿಸುವ ವಾಹನಗಳ ಚಾಲಕರಿಂದ ಕೆಲವು ಆರ್‌ಟಿಓ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಡಹಗಲೇ ಅನಧೀಕೃತವಾಗಿ ಹಣ ವಸೂಲಿ ಮಾಡುವ ಕೃತ್ಯವನ್ನು ನಮ್ಮ ಲೋಕಾ ತಂಡವು ಬೇಧಿಸಿದೆ. ಈ ಬಗ್ಗೆ ಎಫ್‌ಐಆರ್ ದಾಖಲಿಸಿದೆ. ಈ ಜಾಲ ಎಲ್ಲಾ ಕಡೆ ಇರಬಹುದು ಎಂದು ಯೋಚಿಸಿ ರಾಯಚೂರು ಚೆಕ್ ಪೋಸ್ಟಗಳ ಮೇಲೆ ನಿಗಾ ಇಡಲಾಗುವುದು ಎಂದು ಶ್ರೀನಾಥ ಕೆ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಲೋಕಾಯುಕ್ತದ ಅಧೀಕ್ಷಕರಾದ ಸತೀಶ್ ಎಸ್ ಚಿಟಗುಬ್ಬಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಕ್ಷ ಗಿರಿ, ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಹಾಗೂ ಇನ್ನಿತರರು ಇದ್ದರು.

ಮಡಿವಾಳ ಸಮಾಜದ ಅಧ್ಯಕ್ಷರಾಗಿ ಶರಣಪ್ಪ ಮಡಿವಾಳ ನೇಮಕ

ಮುಸ್ಟೂರು, ಚನ್ನಪ್ಪ ಹೇಮನೂರು, ಗೌರವ ಸಲಹೆಗಾರರಾಗಿ ಬಸವರಾಜ ದೇವದುರ್ಗ, ಬಸವರಾಜ ಕೊಪ್ಪರ, ಗುರುರಾಜ ಗಬ್ಬೂರು, ಬಸವರಾಜ ತುಮಕೂರು ಶಿಕ್ಷಕರು ಇವರನ್ನು ನೇಮಕ ಮಾಡಲಾಯಿತು.

ಸನ್ಮಾನ: ಇದೇ ವೇಳೆ ನೂತನ ಪದಾಧಿಕಾರಿಗಳಾಗಿ ನೇಮಕ ಗೊಂಡವರನ್ನು ಸಮಾಜದ ಮುಖಂಡರು ಸನ್ಮಾನಿ ಗೌರವಿಸಿ ದರು.

ಈ ಸಂದರ್ಭದಲ್ಲಿ ಸಮಾಜದ ಸದಸ್ಯರಾದ ಚಂದ್ರು ದೇವದುರ್ಗ, ಬಸವ ಅಂಜಳ, ಸುನೀಲ್, ಮೌನೇಶ, ಬಸವ ಮಲದಕಲ್, ನಿಂಗಪ್ಪ, ಗೂಳಪ್ಪ, ಸಿದ್ದಪ್ಪ, ಆಂಜನೇಯ, ಶಿವಪ್ಪ, ನಾಗಪ್ಪ, ಮೌನೇಶ, ಹನ್ಮಂತ್ರಾಯ ಹೇಮನೂರು, ದೇವಪ್ಪ, ಶರೀಫ್, ರಾಮು, ನಿಂಗಪ್ಪ, ಉದಯ ಗಬ್ಬೂರು, ಜಯಲಕ್ಷ್ಮಿ ದೇವದುರ್ಗ ಸೇರಿದಂತೆ ಮಡಿವಾಳ ಸಮಾಜದ ಮುಖಂಡರು, ಯುವಕರು ಇದ್ದರು.

ಕಲ್ಯಾಣ ಕರ್ನಾಟಕದಲ್ಲಿ ಮೊದಲ ಬಾರಿಗೆ ಕಲಾ ಸಂಕುಲ ಸಂಸ್ಥೆ ವಿನೂತನ ಪ್ರಯತ್ನ

ಪುಸ್ತಕ ಮಳಿಗೆಗಳನ್ನು ತೆರೆಯಲು ಆಸಕ್ತಿಯಿರುವ ಪ್ರಕಾಶಕರು ಹಾಗೂ ಲೇಖಕರು ಜ.15ರೊಳಗೆ ಹೆಸರು ನೋಂದಾಯಿಸಿಕೊಳ್ಳಬೇಕಿದ್ದು, ಹೆಚ್ಚಿನ ಮಾಹಿತಿಗೆ ಮಾರುತಿ ಬಡಿಗೇರ್ (ಕಾರ್ಯದರ್ಶಿ) ಮೊ. 94487 77383 ಸಂಪರ್ಕಿಸಬಹುದು.

ಶಿಕ್ಷಕರ ಅರ್ಹತಾ ಪರೀಕ್ಷೆ ಕಡ್ಡಾಯ ವಿರೋಧಿಸಿ 8 ರಂದು ಕಪ್ಪು ಪಟ್ಟಿ ಧರಿಸಿ ಪಾಠ

ಚಂದ್ರಶೇಖರ ನುಗ್ಲಿ ಅವರ ನೇತೃತ್ವದಲ್ಲಿ ತೀರ್ಮಾನಿಸಿದ್ದು ಅದರಂತೆ ದೇಶ್ಯಾದ್ಯಂತ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಪ್ರಜಾಪ್ರಭುತ್ವದಲ್ಲಿ ಮತದಾನ ಪಾತ್ರ ದೊಡ್ಡದು: ಪಿ.ಎಸ್.ವಸ್ತದ್

ರಾಯಚೂರು ಜಿಲ್ಲೆಯ ರಾಷ್ಟಿಯ ಮತದಾರ ದಿನಾಚರಣೆಯ ಕಾರ್ಯಕ್ರಮಗಳು ನಾವು ಕಳಿಸಿದ ಸುತ್ತೋಲೆಯಂತೆ ಸಮಯಕ್ಕೆ ಸರಿಯಾಗಿ ತಾಲೂಕ, ಜಿಲ್ಲಾ ಮತ್ತು. ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಆಯೋಜನೆ ಮಾಡಬೇಕೆಂದರು.

ಇದೇ ಸಂದರ್ಭದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ.ಎಂ. ಹನುಮಂತಪ್ಪ, ಜಿಲ್ಲಾ ಪಂಚಾಯತ್ ಸಹಾಯಕ ಕಾರ್ಯದರ್ಶಿ ರಾಘವೇಂದ್ರ ಕುಲಕರ್ಣಿ, ಚುನಾವಣೆ ತಹಸಿಲ್ದಾರ್ ಪರಶುರಾಮ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸೋಮಶೇಖರ ಹೊಕ್ರಾಣಿ, ರಾಷ್ಟ್ರೀಯ ಮತದಾರರ ದಿನಾಚರಣೆ ಕಾರ್ಯಕ್ರಮದ ನೋಡಲ್ ಅಧಿಕಾರಿ ಡಾ. ದಂಡಪ್ಪ ಬಿರಾದಾರ, ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ವಿವಿಧ ವೈದ್ಯಕೀಯ ಕಾಲೇಜಿನ ಹಾಗೂ ವಿವಿಧ ಇಂಜಿನಿಯರಿಂಗ್ ಕಾಲೇಜಿನ ಉಪನ್ಯಾಸಕರು, ತಾಲೂಕ ಆರೋಗ್ಯ ಅಧಿಕಾರಿಗಳು, ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯ ಮತ್ತು ಜಿಲ್ಲಾ ಡಯಟ್ ಕಾಲೇಜಿನ ಅಧಿಕಾರಿಗಳು ಸಭೆಯಲ್ಲಿ ಇದ್ದರು.

ಮಕ್ಕಳ ಜೀವನದ ಗುರಿಸಾಧನೆಗೆ ಬಾಲ್ಯವಿವಾಹದಿಂದ ಅಡ್ಡಿ: ಡಾ ರಮೇಶ

ಮಾಡುವುದರಿಂದ ಹೆಣ್ಣು ಮಗು ಕೌಟುಂಬಿಕ ಹಿಂಸೆ ಮತ್ತು ಮಾನಸಿಕ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಅಲ್ಲದೆ ಇದು ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗಿದ್ದು, ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅಡ್ಡಿ. ಅಲ್ಲದೆ ಹೆಣ್ಣು ಮಗುವಿಗೆ 18 ವರ್ಷ ತುಂಬುವುದರೊಳಗೆ ಮದುವೆ ಮಾಡಿದಲ್ಲಿ ಬಾಲ್ಯ ವಿವಾಹ ನಿಷೇಧ ಕಾಯ್ದೆ-2006ರ ಪ್ರಕಾರ ಗಂಡಿನ ಮನೆಯವರಿಗೆ, ಮದುವೆ ಮಾಡಿಸಿದವರಿಗೆ, ಭಾಗಿಯಾದವರಿಗೆ 1 ಲಕ್ಷ ದಂಡ ಹಾಗೂ 2 ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕಿದೆ ಎಂದರು.

ಈ ವೇಳೆ ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ ಅವರು ಮಾತನಾಡಿ, ಪ್ರತಿ ಮನುಷ್ಯನ ಜೀವನದಲ್ಲಿ ಸಾಮಾನ್ಯವಾಗಿ 10-19 ವರ್ಷಗಳ ವಯೋಮಾನ ಅತ್ಯಂತ ಸೂಕ್ಷ್ಮ ಕಾಲ ಘಟ್ಟವಾಗಿದೆ. ಈ ಹಂತದಲ್ಲಿ ಹಾರ್ಮೋನುಗಳ ಬದಲಾವಣೆಯೊಂದಿಗೆ ಉಂಟಾಗುವ ಧ್ವನಿ ಬದಲಾವಣೆ, ಬಾಲಕರಲ್ಲಿ ಮಿಸೆ ಗಡ್ಡಗಳ ಕಾಣಿಸುವಿಕೆ, ಬಾಲಕಿಯರಲ್ಲಿ ಋತುಚಕ್ರ ಆರಂಭವಾಗುವ ಜೊತೆಗೆ ದೈಹಿಕ ಬದಲಾವಣೆ, ಕಂಕುಳದಲ್ಲಿ ಕೂದಲುಗಳ ಕಾಣಿಸುವಿಕೆ ಸೇರಿದಂತೆ ಮುಖದಲ್ಲಿ ಮೊಡವೆಗಳು ಕಂಡು ಬರಲಾರಂಬಿಸುತ್ತವೆ. ಇವೆಲ್ಲವುಗಳು ಹದಿಹರೆಯದ ಸಂಕೇತವಾದರೆ, ದೈಹಿಕ ಆಕರ್ಷಣೆಗೆ ಒಳಗಾಗುವ ಸೂಕ್ಷ್ಮ ಅಂಶದ ಕುರಿತು ಅದರ ಸಾಧಕ-ಭಾದಕಗಳ ಬಗ್ಗೆ ಹೆಚ್ಚು ಜಾಗೃತಿ ವಹಿಸಬೇಕಿದೆ. ಅಲ್ಲದೆ ಮಕ್ಕಳ ಏಳ್ಗೆಗಾಗಿ ಹಗಲಿರಳು ತಂದೆ-ತಾಯಿ ಶ್ರಮಿಸುವುದನ್ನು ನಾವು ಕಾಣುತ್ತೇವೆ. ಮಕ್ಕಳು ಉನ್ನತ ಹುದ್ದೆ, ಸ್ಥಾನಮಾನ ಪಡೆಯಲಿ ಎಂಬ ಮಹಾದಾಸೆ ಇರುತ್ತದೆ. ಈ ದಿಶೆಯಲ್ಲಿ ಸರಿಯಾದ ಪೌಷ್ಟಿಕಾಹಾರ ಸೇವನೆ, ವ್ಯಾಯಾಮ, ಯೋಗಗಳೊಂದಿಗೆ ಶ್ರದ್ಧೆಯಿಂದ ಓದಿನ ಕಡೆ ಗಮನ ನೀಡುವ ಮೂಲಕ ಪ್ರತಿ ಆರು ತಿಂಗಳಿಗೊಮ್ಮೆ ಜಂತುಹುಳು ಮಾತ್ರೆ, ಪ್ರತಿವಾರಕ್ಕೊಮ್ಮೆ ಕಬ್ಬಿಣಾಂಶ ಮಾತ್ರೆ ಸೇವಿಸಿ ದೇಹದಲ್ಲಿ ಕಬ್ಬಿಣಾಂಶದ ಕೊರತೆಯಾಗದಂತೆ ಮುತವರ್ಜಿ ವಹಿಸಬೇಕೆಂದರು.

ಸ್ನೇಹಾ ಕ್ಲಿನಿಕ್ ಸದ್ಬಳಕೆ ಮಾಡಿಕೊಳ್ಳಿ: ರಾಷ್ಟಿಯ ಕಿಶೋರಿ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ಸ್ನೇಹಾ ಕ್ಲಿನಿಕ್‌ಗಳ ಮೂಲಕ ಹದಿಹರೆಯದ ಆರೋಗ್ಯ ಸಮಸ್ಯೆಗಳಿಗೆ ಆಪ್ತ ಸಮಾಲೋಚನೆಗಾಗಿ ಆರೋಗ್ಯ ಕೇಂದ್ರಗಳಲ್ಲಿ ಅವಕಾಶ ಕಲ್ಪಿಸಿದ್ದು, ಇದರ ಸದುಪಯೋಗ ಪಡೆದುಕೊಳ್ಳಲು ಹಾಗೂ ತಂಬಾಕು ಉತ್ಪನ್ನಗಳ ಸೇವನೆಯ ದುಷ್ಪರಿಣಾಮಗಳ ಬಗ್ಗೆ ತಿಳಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ನಿಲಯ ಪಾಲಕರಾದ ರಂಗನಾಥ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಹಿರಿಯ ಆರೋಗ್ಯ ನಿರಿಕ್ಷಣಾಧಿಕಾರಿ ಭಾನುಕಾಂತ ರೆಡ್ಡಿ, ಹಿರಿಯ ಪಿಹೆಚ್‌ಸಿಓ ರೇಣುಕಾ, ಶಿಕ್ಷಕರಾದ ರಮೇಶ, ಪಿಹೆಚ್‌ಸಿಓ ರಸೂಲ್‌ಬಿ, ಹೆಚ್‌ಐಓ ಮಹಾಲಕ್ಷ್ಮಿ, ಆಶಾ ಕಾರ್ಯಕರ್ತೆ ಶಂಕ್ರಮ್ಮ, ನಾಗಮ್ಮ ಸೇರಿದಂತೆ ಶಾಲಾ ಮಕ್ಕಳು ಇದ್ದರು.

ಪತ್ರಿಕೆ ಓದುವ ಹವ್ಯಾಸ ಬೆಳಸಿಕೊಳ್ಳಿ



ಮತದಾರರ ಪಟ್ಟಿಯ ವಿಚಾರ: ಹುನಗುಂದದಲ್ಲಿ ಹಾಲಿ-ಮಾಜಿ ಶಾಸಕರ ಆರೋಪ-ಪ್ರತ್ಯಾರೋಪ

ಬಾಗಲಕೋಟೆ,ಜ.07-

ಮತದಾರರ ಪಟ್ಟಿಯ ವಿಚಾರವಾಗಿ ಹುನಗುಂದ ಮತಕ್ಷೇತ್ರದಲ್ಲಿ ಹಾಲಿ ಹಾಗೂ ಮಾಜಿ ಶಾಸಕರ ನಡುವೆ ಆರೋಪ-ಪ್ರತ್ಯಾರೋಪ ತೀವ್ರಗೊಂಡಿದ್ದು, ಸಾರ್ವಜನಿಕ, ರಾಜಕೀಯ ವಲಯದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.

ಬಿಜೆಪಿ ಪಕ್ಷದ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಹಾಗೂ ಹಾಲಿ ಶಾಸಕ ವಿಜಯಾನಂದ ಕಾಶಪ್ಪನವರ ನಡುವೆ ಮಾತಿನ ಸಮರ ಜೋರಾಗಿದ್ದು, ಪರಸ್ಪರ ಏಕವಚನದಲ್ಲಿ ನಿಂದನೆ ಮಾಡುವ ಹಂತಕ್ಕೂ ತಲುಪಿದೆ.

ಹುನಗುಂದ ಮತಕ್ಷೇತ್ರದ ಮುರಡಿ ಗ್ರಾಮದಲ್ಲಿ ಅಪ್ರಾಪ್ತ ಬಾಲಕರ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸಲಾಗಿದೆ. ಇದಕ್ಕೆ ಶಾಸಕ ವಿಜಯಾನಂದ ಕಾಶಪ್ಪನವರ ಹಾಗೂ ಅವರ ಬೆಂಬಲಿಗರ ಕುಮ್ಮಕ್ಕು ಇದೆ ಎಂದು ಆರೋಪಿಸಿದ ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಅವರು, ಜಿಲ್ಲಾ ಆಡಳಿತ ಭವನದಲ್ಲಿ ಪ್ರತಿಭಟನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿದರು. ಹುನಗುಂದ ಮತಕ್ಷೇತ್ರದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಅಕ್ರಮಗಳು ನಡೆಯುತ್ತಿವೆ. ಅಭಿವೃದ್ಧಿ ಕಾರ್ಯಗಳಿಗಿಂತ ಹಾಲಿ ಶಾಸಕರ ಅಕ್ರಮ ಚಟುವಟಿಕೆಗಳೇ ಹೆಚ್ಚಾಗಿವೆ ಎಂದು ಮಾಜಿ ಶಾಸಕ ದೊಡ್ಡನಗೌಡ ಪಾಟೀಲ ಅವರು ಗಂಭೀರ ಆರೋಪ ಮಾಡಿದರು.

ಈ ಆರೋಪಗಳ ಹಿನ್ನೆಲೆಯಲ್ಲಿ ಪ್ರತಿಕ್ರಿಯಿಸಿದ ಹಾಲಿ ಶಾಸಕ ವಿಜಯಾನಂದ ಕಾಶಪ್ಪನವರ, ಗರಂ ಆಗಿ ಏಕವಚನದಲ್ಲಿ ಮಾಜಿ ಶಾಸಕರನ್ನು ನಿಂದಿಸಿದ್ದಾರೆ. ದೊಡ್ಡನಗೌಡರು ಅಲ್ಲ, ದಡ್ಡ ಗೌಡರು ಎಂದು ಕುಟುಕಿದ ಅವರು, 2025ರ ಮತದಾರರ ಪಟ್ಟಿಯ ಪರಿಷ್ಕರಣೆ ವೇಳೆ 17 ವರ್ಷ ತುಂಬಿದವರ ಹೆಸರನ್ನು ನೋಂದಣಿ ಮಾಡಲು ಅವಕಾಶ ಇರುತ್ತದೆ. 2025ರಲ್ಲಿ ಯಾವುದೇ ಚುನಾವಣೆ ಇಲ್ಲ. 18 ವರ್ಷ ಪೂರ್ತಿಯಾದ ನಂತರ ಮಾತ್ರ ಚುನಾವಣಾ ಆಯೋಗ ಮತದಾರ ಗುರುತಿನ ಚೀಟಿ ನೀಡಲಿದೆ ಎಂದು ಸ್ಪಷ್ಟಪಡಿಸಿದರು.

ಇದೇ ವೇಳೆ ಮಾತನಾಡಿದ ಕಾಶಪ್ಪನವರ, ನಿಮ್ಮ ಹೆಸರು ನಾಲ್ಕು ಮತಗಟ್ಟೆಗಳಲ್ಲಿ ಇರುವುದಕ್ಕೂ, ನಿಮ್ಮ ಪುತ್ರನ ಹೆಸರು ಏಳು ಕಡೆಗಳಲ್ಲಿ ಇರುವುದಕ್ಕೂ ದಾಖಲೆ ಸಮೇತ ಸಾಕ್ಷಿ ನೀಡುತ್ತೇನೆ. ಧೈರ್ಯ ಇದ್ದರೆ ಸಾರ್ವಜನಿಕ ಚರ್ಚೆಗೆ ಬನ್ನಿ ಎಂದು ಸವಾಲು ಹಾಕಿದರು.

ಜೆಸ್ಕಾಂ ಇಂಜಿನಿಯರ್ ರನ್ನು ಅಮಾನತುಗೊಳಿಸಲು ಒತ್ತಾಯಿಸಿ ಧರಣಿ



ಬೀದರ್,ಜ.07-

ಜಿಲ್ಲೆಯ ಜೆಸ್ಕಾಂ ಅಧೀಕ್ಷಕ ಇಂಜಿನಿಯರವೀರಭದ್ರಪ್ಪ ಶಾಲಿ ಮನಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ ರಮೇಶ್ ಪಾಟೀಲ್ ಅವರು ಗುತ್ತಿಗೆದಾರರೊಂದಿಗೆ ಕೈಜೋಡಿಸಿ ಸರ್ಕಾರದ ಕೋಟ್ಯಾಂತರ ಹಣವನ್ನು ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿಸಿ, ಅವರನ್ನು ಕೂಡಲೇ ಸೇವೆಯಿಂದ ಅಮಾನತು ಮಾಡಬೇಕು. ಜೊತೆಗೆ ಸಂಬಂಧಿಸಿದ ಗುತ್ತಿಗೆದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ಅವರ ಪರವಾನಗಿಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ಪ್ರಜಾಶಕ್ತಿ ಸಮಿತಿ ವತಿಯಿಂದ ಮಂಗಳವಾರ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಯಿತು.

ನಗರದ ಜೆಸ್ಕಾಂ ಕಚೇರಿ ಎದುರು ನಡೆದ ಧರಣಿಯಲ್ಲಿ ಅಧಿಕಾರಿಗಳ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಲಾಯಿತು. ಬಳಿಕ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಮನವಿ ಪತ್ರದಲ್ಲಿ, ಜೆಸ್ಕಾಂ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಸೇರಿಕೊಂಡು ಬೀದರ್ ತಾಲೂಕಿನ ಖಾಸಗಿ ಲೇಔಟ್ ಮಾಲೀಕರಿಂದ ವಿದ್ಯುತ್

ಕಂಬಗಳ ಅಳವಡಿಕೆಗೆ ಚಲನ್ ಮುಖಾಂತರ ಹಣ ಪಾವತಿ ಪಡೆದಿದ್ದರೂ, ಖಾಸಗಿ ಕಂಬ ಹಾಗೂ ಟ್ರಾನ್ಸ್‌ಫಾರ್ಮರ್ (ಟಿ.ಸಿ) ಅಳವಡಿಸದೇ, ಸರ್ಕಾರದ ಕಂಬಗಳು ಹಾಗೂ ಸರ್ಕಾರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಿ ಸರ್ಕಾರದ ಕೋಟ್ಯಾಂತರ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಕುರಿತು ಮೇಲಾಧಿಕಾರಿಗಳಿಗೆ ದೂರು ನೀಡಿದರೂ, ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ. ಇದರಿಂದ ಮೇಲಾಧಿಕಾರಿಗಳೂ ಈ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆ ವ್ಯಕ್ತವಾಗುತ್ತಿದೆ. ಆದ್ದರಿಂದ ತಪ್ಪಿತಸ್ಥ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು. ಜೊತೆಗೆ ಅಕ್ರಮದಲ್ಲಿ ಭಾಗಿಯಾದ ಗುತ್ತಿಗೆದಾರರ ಪರವಾನಗಿಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕು ಎಂದು ಒತ್ತಾಯಿಸಲಾಗಿದೆ.

ಈ ಬೇಡಿಕೆಗಳಿಗೆ ಸ್ಪಂದಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ನಿವಾಸದ ಮುಂದೆ ಸಾಂಕೇತಿಕ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಜಾಶಕ್ತಿ ಸಮಿತಿಯ ಜಿಲ್ಲಾಧ್ಯಕ್ಷ ಸಾಯಿ ಶಿಂಧೆ, ಉಪಾಧ್ಯಕ್ಷ ಮಹೇಂದ್ರಕುಮಾರ ಹೊಸಮನಿ, ಗುರು ನೇಮತಾಬಾದ್, ರಾಜಕುಮಾರ ಗುಮ್ಮೆ, ಶಿವಕುಮಾರ, ಆಕಾಶ್ ತ್ರಿಮುಖೆ, ಧನರಾಜ್ ಮೇತ್ರೆ ಸೇರಿದಂತೆ ಅನೇಕರು ಧರಣಿಯಲ್ಲಿ ಭಾಗವಹಿಸಿದ್ದರು.

ಸುದೀರ್ಘ ಅವಧಿಯ ಸುವರ್ಣ ಯುಗದ ಸರದಾರ ಸಿಎಂ ಸಿದ್ದರಾಮಯ್ಯ

ಕಲಬುರಗಿ,ಜ.07-

ಕರ್ನಾಟಕದ ಇತಿಹಾಸದಲ್ಲಿ ಸುಧಿರ್ಘ ಅವಧಿ ಸಿ.ಎಂ ಆಗಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ದಾಖಲೆಯನ್ನು ಬರೆದಿದ್ದಾರೆ. ಈ ಮೊದಲು ಡಿ.ದೇವರಾಜ ಅರಸುರವರು 7 ವರ್ಷ 239 ದಿನ ಪೂರೈಸಿದರೆ,ಎಸ್. ನಿಜಲಿಂಗಪ್ಪನ'ವರು,7ವರ್ಷ 175 ದಿನಗಳು,ತದನಂತರ ರಾಮಕೃಷ್ಣ ಹೆಗಡೆ 5 ವರ್ಷ 216 ದಿನಗಳು,ಯಡಿಯೂರಪ್ಪನವರು 5 ವರ್ಷ 82 ದಿನಗಳು ಪೂರೈಸಿದ ದಾಖಲೆಯನ್ನು ಸರಿಗಟ್ಟಿ ಇಂದು ಮುಖ್ಯ ಮಂತ್ರಿ ಸಿದ್ದರಾಮಯ್ಯನವರು 7 ವರ್ಷ 240 ದಿನಗಳೊಂದಿಗೆ ಮುಂದುವರೆಯುತ್ತಿದ್ದಾರೆ.



ಸಿದ್ದರಾಮಯ್ಯನವರ ದಾಖಲೆಯ ವಿಚಾರವನ್ನು ಅವರ ಅಭಿಮಾನಿ ಬಳಗದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಲ್ಯಾಣ ಕರ್ನಾಟಕ ಕಾರ್ಯಾದ್ಯಕ್ಷ ಭೂತಾಳಿ ಕರಗೊಂಡ ಹಾಗೂ ಭೋವಿವಡ್ಡರ ಸಮಾಜದ ತಾಲೂಕು ಅಧ್ಯಕ್ಷ ಪ್ರಭು ಭೋವಿಯವರು ಹರ್ಷವ್ಯಕ್ತಪಡಿಸುವುದರ ಜೊತೆಗೆ ನಮ್ಮೊಂದಿಗೆ ಮಾಹಿತಿ ಹಂಚಿಕೊಂಡರು.

ಮುಖ್ಯಮಂತ್ರಿಯಾಗಿ ಇಂದಿಗೆ 7 ವರ್ಷ 240 ದಿನ ಪೂರೈಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಕೀರ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಜನರಾಗಿದ್ದು, ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಆಡಳಿತಾವಧಿಯ ದಾಖಲೆ ಮುರಿದು ಸಿದ್ದರಾಮಯ್ಯ ಹೊಸ ದಾಖಲೆ ಬರೆದಿದ್ದಾರೆ. ಮೈಸೂರು ರಾಜ್ಯದ ಅವಧಿಯೂ ಸೇರಿದಂತೆ ಮರು ನಾಮಕರಣಗೊಂಡ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಹಿಂದುಳಿದ ವರ್ಗಗಳ ನೇತಾರರೆಂದೇ ಖ್ಯಾತಿಯಾದ ಡಿ. ದೇವರಾಜ ಅರಸು ಅವರು ಎರಡು ಅವಧಿಗೆ ಅತಿ ಹೆಚ್ಚು ಅಂದರೆ 7 ವರ್ಷ 239 ದಿನಗಳ ಕಾಲ ಮುಖ್ಯಮಂತ್ರಿ ಆಗಿದ್ದರು. ಒಂದು ಅವಧಿಯಲ್ಲಿ 5 ವರ್ಷ 286 ದಿನಗಳು, ಮತ್ತೊಂದು ಅವಧಿಗೆ 1 ವರ್ಷ 318 ದಿನಗಳ ಕಾಲ ಸಿಎಂ ಆಗಿ ಅಧಿಕಾರ ನಡೆಸಿದ್ದರು. ಭೂ ಸುಧಾರಣೆ ಕಾಯ್ದೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣಕ್ಕೆ ಹೆಸರಾಗಿದ್ದ ಅರಸು ನಂತರ ಮತ್ತಾವುದೇ ಮುಖ್ಯಮಂತ್ರಿಗಳು ಇಷ್ಟು ಸುದೀರ್ಘ ಅವಧಿಗೆ ರಾಜ್ಯವನ್ನು ಆಳಿರಲಿಲ್ಲ. ಅರಸು ನಂತರ ಅರಸು ಸಿದ್ಧಾಂತಗಳನ್ನೇ ಮುಂದಿಟ್ಟುಕೊಂಡು ರಾಜಕೀಯ ಹೆಜ್ಜೆಗಳನ್ನಿರಿಸುತ್ತ ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿ ಯಾಗಿದ್ದಾಗ 5 ವರ್ಷ 4 ದಿನಗಳ ಕಾಲ ಅಧಿಕಾರ ನಿಭಾಯಿಸಿದ್ದರು.

ಮಾಜಿ ಸಿಎಂ ದಿವಂಗತ ದೇವರಾಜ ಅರಸು ಅವರ ಸುದೀರ್ಘ ಅವಧಿಯ ಮುಖ್ಯಮಂತ್ರಿ ದಾಖಲೆಯನ್ನು ಜನರ ಆಶೀರ್ವಾದದಿಂದ ಮುರಿಯುವುದಕ್ಕೆ ಸಾಧ್ಯವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಸೋಮವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿದ್ದ ಡಿ.ದೇವರಾಜ ಅರಸು ಅವರು ಮೈಸೂರಿನವರೇ ಆಗಿರುವುದು ಸಂತೋಷದ ಸಂಗತಿ. ಕಡಿಮೆ ಜನಸಂಖ್ಯೆಯ ಅರಸು ಸಮುದಾಯದವರಾಗಿದ್ದ ದೇವರಾಜ ಅರಸು ಅವರು ಜನಪ್ರಿಯ ನಾಯಕರಾಗಿದ್ದರು. ಅಂತಹ ಮಹಾನ್ ನಾಯಕನಿಗೂ ಮತ್ತು ನನಗೂ ಹೋಲಿಕೆ ಸರಿಯಲ್ಲ. ಅರಸು ಅವರ ಅವಧಿಯಲ್ಲಿ ರಾಜ್ಯದ ಪರಿಸ್ಥಿತಿ ಭಿನ್ನವಾಗಿತ್ತು.

ಬಜೆಟ್ ಮಂಡನೆಯಲ್ಲೂ ದಾಖಲೆ

ಅಹಿಂದ ಚಳವಳಿ ಮೂಲಕ ರಾಜ್ಯದ ಜನಪ್ರಿಯ ರಾಜಕೀಯ ನಾಯಕರಾಗಿರುವ ಸಿದ್ದರಾಮಯ್ಯ ಅವರು ದಾಖಲೆಗಳ ಸರದಾರರಾಗಿದ್ದಾರೆ. ಹಲವು ಹೊಸ ಯೋಜನೆಗಳಿಗೆ ಮುನ್ನುಡಿ ಬರೆದಿರುವ ಅವರು ಕರ್ನಾಟಕದಲ್ಲಿ ಅತಿ ಹೆಚ್ಚು ಬಾರಿಗೆ ಬಜೆಟ್ ಮಂಡಿಸಿದ ದಾಖಲೆ ಈಗಾಗಲೇ ಅವರ ಹೆಸರಿನಲ್ಲಿದ್ದು, 16 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ ಅವರು 17ನೇ ಬಜೆಟ್ ಮಂಡಿಸಲು ತಯಾರಿ ನಡೆಸಿದ್ದಾರೆ.

ಅರಸು ದಾಖಲೆ ಸರಿಗಟ್ಟಿದ ದಾಖಲೆ ರಾಮಯ್ಯ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಸುದೀರ್ಘ ಅವಧಿಗೆ ಸೇವೆ ಸಲ್ಲಿಸಿದ ಮಹೋನ್ನತ ಪಟ್ಟ ಮಂಗಳವಾರ(ಜ.6) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾಲಿಗೆ ಸಿಗಲಿದೆ. ಸಿಎಂ ಆಗಿ ಉಳುವವನೇ ಹೊಲದೊಡೆಯ ಎಂಬ ಕ್ರಾಂತಿಕಾರಿ ನಿರ್ಣಯ ಮಾಡಿದ್ದ ಡಿ.ದೇವರಾಜ ಅರಸು ಅವರ 5 ವರ್ಷ 286 ದಿನಗಳ ಸೇವಾವಧಿಯನ್ನು ಅಹಿಂದ ನಾಯಕ ಹಾಲಿ ಸಿಎಂ ಸಿದ್ದರಾಮಯ್ಯ ಸರಿಗಟ್ಟಲಿದ್ದಾರೆ. ಆ ಮೂಲಕ ರಾಜ್ಯ ಕಂಡ ದೀರ್ಘಾವಧಿ ಮುಖ್ಯಮಂತ್ರಿ ಎನಿಸಿಕೊಳ್ಳಲಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿ ಪೂರ್ಣ ಮುಖ್ಯಮಂತ್ರಿ ಆಗಿ ಮುಂದುವರಿದರೆ ಅದೂ ಐತಿಹಾಸಿಕ ದಾಖಲೆಯಾಗಲಿದೆ.

ಅವಧಿ ಪೂರೈಸಿದ್ರೆ ದಾಖಲೆ ಇನ್ನಷ್ಟು ಗಟ್ಟಿ: ದೇವರಾಜ ಅರಸು ಅವರು 1972ರ ಮಾರ್ಚ್ 20 ರಿಂದ 1980ರ ಜನವರಿ 12 ರವರೆಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅವರು ಬರೋಬ್ಬರಿ 7 ವರ್ಷ 239 ದಿನಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಿದ್ದರು. ಸಿಎಂ ಸಿದ್ದರಾಮಯ್ಯ ಅವರು 2 ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ.

ಭರ್ತಿ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಳ್ವಿಕೆ ನಡೆಸಿದ್ದರು. ಇದೀಗ 2ನೇ ಅವಧಿಯಲ್ಲಿ 2023ರ ಮೇ 20ರಿಂದ ಇಂದಿನವರೆಗೂ ಸಿದ್ದರಾಮಯ್ಯ ಆಡಳಿತ ನಡೆಸುತ್ತಿದ್ದು ಜ.6ಕ್ಕೆ 7 ವರ್ಷ 239 ದಿನ(2792) ಪೂರೈಸಿದ್ದು 4 ದಶಕಗಳ ಬಳಿಕ ಅರಸು ದಾಖಲೆ ಸರಿಗಟ್ಟಲಿದ್ದಾರೆ. ಈ ಬಾರಿಯೂ ಪೂರ್ಣಾವಧಿ ಸಿಎಂ ಆದಲ್ಲಿ ಒಟ್ಟಾರೆ 3771 ದಿನಗಳ ಕಾಲ ಇರಲಿದ್ದು ದಾಖಲೆ ಇನ್ನಷ್ಟು ಗಟ್ಟಿಯಾಗಲಿದೆ.


ಈ ಮೊದಲು ಸಿದ್ದರಾಮಯ್ಯನವರಿಗೆ ಈ ಕುರಿತು ಮಾತನಾಡಿಸಿದಾಗ ದಾಖಲೆಗಳು ನಿರ್ಮಾಣವಾಗೋದೇ ಅದನ್ನು ಮುರಿಯಕ್ಕೆ ಮಾಜಿ ಮುಖ್ಯಮಂತ್ರಿ ದೇವರಾಜ ಅರಸು ಅವರೊಂದಿಗೆ ನನ್ನನ್ನು ಹೋಲಿಕೆ ಮಾಡಬೇಡಿ. ಅವರೊಬ್ಬ ಮಹಾನ್ ನಾಯಕ. ಅವರ ದಾಖಲೆಯನ್ನು ನಾನು ಮುರಿದಿರಬಹುದು, ಈ ದಾಖಲೆ ಮುರಿಯುವವರು, ಹೆಚ್ಚು ಬಾರಿ ಬಜೆಟ್ ಮಂಡಿಸುವವರೂ ಮುಂದೆ ಬರಬಹುದು, ದಾಖಲೆ ನಿರ್ಮಾಣವಾಗುವುದೇ ಮುರಿಯಲೆಂದು ಎಂದು ತಮ್ಮ ಪ್ರಭುದ್ದತೆಯ ರಾಜಕಾರಣಕ್ಕೆ ಅರ್ಥ ಕಲ್ಪಿಸಿದರು.

ಭೂತಾಳಿ ಕರಗೊಂಡ
ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಲ್ಯಾಣ ಕರ್ನಾಟಕ ಕಾರ್ಯದರ್ಶಿಗಳು
ಪ್ರಭು ಭೋವಿವಡ್ಡರ
ಭೋವಿವಡ್ಡರ ಸಮಾಜದ ಅಧ್ಯಕ್ಷರು

ಕಲಬುರಗಿಯೇನು ಆಫ್ರಿಕಾ ಖಂಡವೇ?: ಬಹಿರ್ದೆಸೆ ಬಗ್ಗೆ ನ್ಯಾ.ಬಿ.ಎಸ್ ಪಾಟೀಲ್ ಕಳವಳ

ಕಲಬುರಗಿ,ಜ.07-

ಈಗಿನಂತಹ ಅಡ್ವಾನ್ಸ್ ಜಗತ್ತಿನಲ್ಲಿ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಬಹಿರ್ದೆಸೆ ಪದ್ದತಿ ಇನ್ನೂ ಜೀವಂತವಿದೆ, ಇದೇನು ಆಫ್ರಿಕಾ ಖಂಡವೇ ಎನ್ನುವ ಪ್ರಶ್ನೆ ಕಾಡಿದೆ ಎಂದು ಕರ್ನಾಟಕ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್ ಪಾಟೀಲ್ ಅವರು ಕಳವಳ ವ್ಯಕ್ತಪಡಿಸಿದರು.



ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುವ ವೇಳೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ಅವರು, ಬಯಲು ಶೌಚಮುಕ್ತ ಜಿಲ್ಲೆ, ರಾಜ್ಯ ಎನ್ನುವವರು ಈಗಲೂ ಹಳ್ಳಿಗಳ ಸರ್ಕಲ್ ಗಳಲ್ಲಿ ಹೋಗಿ ಗಮನಿಸಿ, ವೃದ್ದರು, ಮಕ್ಕಳು ಸೇರಿದಂತೆ ಇತರರು ಬಯಲು ಶೌಚಾಲಯಕ್ಕೆ ಹೋಗುತ್ತಾರೆ. ಇಂತಹ ಅಡ್ವಾನ್ಸ್ ಜಗತ್ತಿನಲ್ಲಿ ನಾವು ಇಷ್ಟು ಹಿಂದೆ ಹೋಗಬೇಕಾ? ಎಂದ ಅವರು ನಾವೇನು ಕಗ್ಗತ್ತಲ ಖಂಡದಲ್ಲಿದ್ದೇವಾ? ಎನ್ನುವ ಪ್ರಶ್ನೆ ಎದುರಾಗುತ್ತದೆ, ಈ ಕುರಿತು ಕೇಸ್ ರಿಜಿಸ್ಟರ್ ಮಾಡಿರುವುದಾಗಿ ತಿಳಿಸಿದರು. ಕಲ್ಯಾಣ ಕರ್ನಾಟಕ ಜಿಲ್ಲೆಗಳ ವ್ಯಾಪ್ತಿಯಲ್ಲಿ 80 ರಿಂದ 85 ಅಧಿಕಾರಿಗಳನ್ನೊಳಗೊಂಡ ಒಟ್ಟು 8 ತಂಡಗಳನ್ನು ರಚಿಸಿ, ಜಿಲ್ಲೆಗಳ ವಿವಿಧ ತಾಲೂಕು ತಹಸೀಲ್ದಾರ್ ಕಚೇರಿ, ಸಹಾಯಕ ಆಯುಕ್ತರ ಕಚೇರಿ, ಮಹಾನಗರ ಪಾಲಿಕೆ, ರಿಜಿಸ್ಟ್ರಾರ್ ಕಚೇರಿ ಸೇರಿದಂತೆ ಇತರೆ ಇಲಾಖೆಗಳ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇವೆ. ಕೆಲವೆಡೆ ಭ್ರಷ್ಟಾಚಾರ, ಅಧಿಕಾರ ಲೋಪ, ಕೆಲಸ ನಿರ್ವಹಿಸದ ಅಧಿಕಾರಿಗಳ ಬಗ್ಗೆ ಮಾಹಿತಿ ಸಿಕ್ಕಿದೆ. ಹೀಗೆ ಅನೇಕ ಗಂಭೀರ ವಿಷಯಗಳ ಬಗ್ಗೆ ನಮ್ಮ ಗಮನಕ್ಕೆ ಬಂದಿದೆ, ಇಂತಹವುಗಳನ್ನೆಲ್ಲ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳಲಿದ್ದೇವೆ ಎಂದರು.

ಆಳಂದ ಚೆಕ್ ಪೋಸ್ಟ್, ಬೀದರ್ ಜಿಲ್ಲೆಯ ಹುಮನಾಬಾದ್ ಚೆಕ್ ಪೋಸ್ಟ್ ಕಡೆಗಳಲ್ಲಿ ಆರ್.ಟಿ.ಓ ಹೆಸರಲ್ಲಿ ಲೂಟಿ ನಡೆಸಲಾಗುತ್ತಿದೆ, ನೇರವಾಗಿ ಸ್ಥಳಕ್ಕೆ ಭೇಟಿ ನೀಡಿದ್ದೇವೆ. ಒಂದು ಗಂಟೆಯಲ್ಲಿ 8 ಸಾವಿರದಷ್ಟು ಹಣ ಸಂಗ್ರಹವಾಗುತ್ತಿರುವುದು ಗಮನಕ್ಕೆ ಬಂದಿದೆ. ಇದರ ಬಗ್ಗೆ ಕ್ರಿಮಿನಲ್ ಪ್ರಕರಣ ದಾಖಲಿಸಿ, ಕ್ರಮ ಜರುಗಿಸಲಿದ್ದೇವೆ ಎಂದು ಹೇಳಿದರು. ಸರ್ಕಾರ, ನಿರ್ಮಿಾಮರು ಕಟ್ಟಿಸಿದ ಮತ್ತು ಅನುಮತಿಸಿದ ಕೆರೆಗಳ ಕುರಿತು ದಾಖಲಾತಿಗಳು ಸಿಗುತ್ತಿಲ್ಲ, ಸ್ವತಂತ್ರಗೊಂಡು 75 ವರ್ಷ ಕಳೆದರೂ ಭೂ ದಾಖಲೆಗಳ ಬಗ್ಗೆ ಮಾಹಿತಿ ಕಲೆ ಹಾಕುವುದರಲ್ಲಿ ವ್ಯವಸ್ಥೆ ಇರುವುದು ಗಮನಿಸಿದರೆ ದುರಂತ ಎನಿಸುತ್ತದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಪಾಲಿಕೆ ವ್ಯಾಪ್ತಿಯಲ್ಲಿ ಕಸ ವಿಲೇವಾರಿ, ನಾಯಿಕಾಟಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು, ಸ್ವಚ್ಛತೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಅಧಿಕಾರಿಗಳ ಕರ್ತವ್ಯ ಎಂದ ಅವರು, ದಾಖಲಿಸಿಕೊಂಡ ಎಲ್ಲ ಪ್ರಕರಣಗಳನ್ನು ಶೀಘ್ರದಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ದೇವರಾಜ ಅರಸು ದಾಖಲೆ ದಾಟಿದರೇ ಸಿದ್ದರಾಮಯ್ಯ?



ಅರಸು ಹಾಕಿಕೊಟ್ಟ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿನ ಭದ್ರ ಬುನಾದಿಯ ಮೇಲೆ ಸಿದ್ದರಾಮಯ್ಯನವರು ಭವ್ಯ ಸೌಧವನ್ನು ನಿರ್ಮಿಸುವ ಅಪೂರ್ವ ಅವಕಾಶವಿತ್ತು. ಆದರೆ, ಹಿಂದುಳಿದ ನಾಯಕ ಎನ್ನುವುದು ಘೋಷಣೆಗಳಿಗಷ್ಟೇ ಸೀಮಿತವಾಯಿತು. ಹಾಗಾಗಿ, ದೇವರಾಜ ಅರಸರ ದಿನಗಳ ದಾಖಲೆ ದಾಟಿದ್ದಾರೆ, ದಾಟಬೇಕಾದ್ದು ಇನ್ನೂ ಇದೆ.

ದೇವರಾಜ ಅರಸು ಅವರು 1972ರಿಂದ 1977ರವರೆಗೆ ಹಾಗೂ 1978ರಿಂದ 1980ರವರೆಗೆ, ಅಂದರೆ 7 ವರ್ಷ 239 ದಿನಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಕರ್ನಾಟಕ ಕಂಡ ಮುಖ್ಯಮಂತ್ರಿಗಳಲ್ಲಿ, ಅರಸು ಅವರು ಅತ್ಯಂತ ಹೆಚ್ಚು ದಿನಗಳ ಕಾಲ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿದ್ದು, ದಾಖಲೆಯ ಪುಟ ಸೇರಿತ್ತು. ಆ ದಾಖಲೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈಗ ದಾಟಿದ್ದಾರೆ. ಮೊದಲ ಅವಧಿ, 2013ರಿಂದ 2018ರವರೆಗೆ ಹಾಗೂ ಎರಡನೆ ಅವಧಿ, 2023ರಿಂದ ಇವತ್ತಿನವರೆಗೆ, 7 ವರ್ಷ 239 ದಿನಗಳ ಕಾಲ ಈ ರಾಜ್ಯದ ಮುಖ್ಯಮಂತ್ರಿಯಾಗಿ ಮುಂದುವರೆಯುವ ಮೂಲಕ ಅರಸರ ದಿನಗಳ ಆ ದಾಖಲೆಯನ್ನು ಮುರಿದಿದ್ದಾರೆ.

ಇಲ್ಲಿ ಗಮನಿಸಬೇಕಾದ ಬಹಳ ಮುಖ್ಯವಾದ ಅಂಶವೆಂದರೆ, ದೇವರಾಜ ಅರಸು ಮತ್ತು ಸಿದ್ದರಾಮಯ್ಯನವರು- ಇಬ್ಬರೂ ಹಿಂದುಳಿದ ವರ್ಗದಿಂದ ಬಂದವರು. ಇಬ್ಬರೂ ಮೈಸೂರು ಜಿಲ್ಲೆಯವರು. ಇಬ್ಬರೂ ಕಾಂಗ್ರೆಸ್ ಪಕ್ಷದಿಂದ ಮುಖ್ಯಮಂತ್ರಿಗಳಾದವರು. ಇಬ್ಬರೂ ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತ ನಿಲುವಿಗೆ ಬದ್ಧರಾದವರು. ದೇವರಾಜ ಅರಸು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿದದ್ದು ಜನವರಿ 7, 1980ರಂದು. ಕಾಕತಾಳೀಯವೋ ಏನೋ, ಸಿದ್ದರಾಮಯ್ಯನವರು ದೇವರಾಜ ಅರಸರ ದಾಖಲೆ ಸರಿಗಟ್ಟುತ್ತಿರುವುದು ಕೂಡ ಇದೇ ಜನವರಿ 7.

ಸಿದ್ದರಾಮಯ್ಯನವರು ಜನಿಸಿದ್ದು 1947ರಲ್ಲಿ. ಅದೇ 1947ರಲ್ಲಿ, ಮೈಸೂರಿನ ಮಹಾರಾಜರ ಆಳ್ವಿಕೆ ಕೊನೆಗಾಣಿಸಲು, ಜನತಂತ್ರ ಸರ್ಕಾರ ರಚನೆಯಾಗಲು ದೇವರಾಜ ಅರಸು ಮೈಸೂರು ಚಲೋ ಚಳವಳಿಯಲ್ಲಿ ಭಾಗವಹಿಸಿದ್ದರು. ದೇವರಾಜ ಅರಸು ಅವರು ರಾಜಕಾರಣದಿಂದ ನಿರ್ಗಮಿಸಿದ್ದು 1982ರಲ್ಲಿ. ಅದೇ 1982ರಲ್ಲಿ ಸಿದ್ದರಾಮಯ್ಯನವರು ರಾಜಕಾರಣಕ್ಕೆ ಅಡಿಯಿಟ್ಟಿದ್ದರು. ಮೊದಲಿಗೆ ತಾಲೂಕು ಬೋರ್ಡ್ ಸದಸ್ಯರಾದರು. ನಂತರ 1983ರಲ್ಲಿ, ಭಾರತೀಯ ಲೋಕದಳ ಪಕ್ಷದಿಂದ, ಚಾಮುಂಡೇಶ್ವರಿ ಕ್ಷೇತ್ರದಿಂದ ಗೆದ್ದು ಶಾಸಕರಾದರು. ಆಗ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ರಚನೆಯಾಗಿತ್ತು. ಅದು ದೇವರಾಜ ಅರಸು ಅವರ ಕೊಡುಗೆಯಾಗಿತ್ತು.

ಅರಸು ಅವರ ಕೊಡುಗೆ ಅಷ್ಟಕ್ಕೇ ನಿಲ್ಲುವುದಿಲ್ಲ. ಅವರ ಸಾಮಾಜಿಕ ನ್ಯಾಯ ಪರಿಪಾಲನೆಗೆ, ಹಿಂದುಳಿದವರನ್ನು ಮೇಲೆತ್ತುವ ಮಹದಾಸೆಗೆ ಮಿತಿಯೇ ಇಲ್ಲ. 1972ರಲ್ಲಿ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಎಲ್.ಜಿ. ಹಾವನೂರು ಅವರ ಅಧ್ಯಕ್ಷತೆಯಲ್ಲಿ ಹಿಂದುಳಿದ ಆಯೋಗ ರಚಿಸಿ, ಅವಧಿಯೊಳಗೆ ವರದಿ ಸ್ವೀಕರಿಸಿ, ಜಾರಿಗೆ ತಂದು ಹಿಂದುಳಿದವರಿಗೆ ಮೀಸಲಾತಿ ನೀಡಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ವರ್ಗವನ್ನು ಮುನ್ನಲೆಗೆ ತಂದಿದ್ದರು. ಹಿಂದುಳಿದ ವರ್ಗಗಳ ಚಾಂಪಿಯನ್ ಎನಿಸಿಕೊಂಡಿದ್ದರು. ಮೈಸೂರಿನ ಅರಸು ಮನೆತನಕ್ಕೆ ಸೇರಿದವರಾಗಿದ್ದರೂ, ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿ, ಕನ್ನಡ ಆಡಳಿತ ಭಾಷೆಯನ್ನಾಗಿ ಮಾಡಿದ್ದರು. ಮಲ ಹೊರುವ ಪದ್ಧತಿ ನಿಷೇಧ, ಋಣ ಪರಿಹಾರ ಕಾಯ್ದೆ, ಜೀತ ವಿಮುಕ್ತಿ ಶಾಸನ ಜಾರಿ ಮಾಡಿದ್ದರು. 332 ಎಕರೆ ಭೂಮಿ ಒದಗಿಸಿ, ಎಲೆಕ್ಟ್ರಾನಿಕ್ ಸಿಟಿಗೆ ಅಡಿಗಲ್ಲು ಹಾಕಿದ್ದರು. ಅದೆಲ್ಲಕ್ಕಿಂತ ಮುಖ್ಯವಾಗಿ ಭೂ ಸುಧಾರಣಾ ಕಾಯ್ದೆಯನ್ನು ಜಾರಿಗೆ ತಂದು, ಭೂರಹಿತರ ಬದುಕಿಗೆ ಭದ್ರ ಬುನಾದಿ ಹಾಕಿದ್ದರು.

ಅರಸು ಅವರು ಅಂದು ತೋರಿದ ಅಂಚಿನ ಜನರ ಬಗೆಗಿನ ಅಂತಃಕರಣದ ಫಲವಾಗಿಯೇ ಇಂದು ಹಲವಾರು ಜನ ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ಶಾಸಕರಾಗಿ ವಿಧಾನಸೌಧದ ಮೆಟ್ಟಿಲು ಹತ್ತಿದ್ದಾರೆ. ಸಚಿವರಾಗಿ ಕಾಯ್ದೆ-ಕಾನೂನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಅದರಲ್ಲೂ ಹಿಂದುಳಿದ ವರ್ಗದಿಂದ ಬಂದ ಎಸ್.ಬಂಗಾರಪ್ಪ, ಎಂ. ವೀರಪ್ಪ ಮೊಯ್ಲಿ, ಧರಂ ಸಿಂಗ್ ಮತ್ತು ಸಿದ್ದರಾಮಯ್ಯನವರು- ರಾಜ್ಯದ ಅತ್ಯುನ್ನತ ಸ್ಥಾನವಾದ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದ್ದಾರೆ. ಇದು ಅಂತಿಂಥ ಕೊಡುಗೆಯಲ್ಲ. ಇಂತಹ ದೂರದೃಷ್ಟಿಯುಳ್ಳ ಧೀಮಂತ ವ್ಯಕ್ತಿ ದೇವರಾಜ ಅರಸು ಅವರಂತಹ ನಾಯಕರೊಂದಿಗೆ ಸಿದ್ದರಾಮಯ್ಯನವರನ್ನು ಹೋಲಿಕೆ ಮಾಡುವುದು, ಅಷ್ಟು ಸರಿಯಲ್ಲ.

ಅರಸು ಅವರ ಕಾಳಜಿಗಳು ಮತ್ತು ಕಾಲವೇ ಬೇರೆ; ಸಿದ್ದರಾಮಯ್ಯನವರ ಕಾಳಜಿಗಳು ಮತ್ತು ಕಾಲವೇ ಬೇರೆ. ಆಯಾಯ ಕಾಲ ಕೇಳುವ ಕಾರ್ಯಕ್ರಮಗಳನ್ನು ಇಬ್ಬರೂ ನೀಡಿದ್ದಾರೆ, ಜನಮನ ಗೆದ್ದಿದ್ದಾರೆ, ಸಾಧಕರೆನಿಸಿಕೊಂಡಿದ್ದಾರೆ.

ಸಿದ್ದರಾಮಯ್ಯನವರು ಮೊದಲ ಬಾರಿಗೆ ಮುಖ್ಯಮಂತ್ರಿಗಳಾದಾಗ- 2013ರಿಂದ 2018ರವರೆಗಿನ ಅವಧಿಯಲ್ಲಿ- ಡಿನೋಟಿಫಿಕೇಷನ್, ಲೋಕಾಯುಕ್ತ ರದ್ದು ಮಾಡಿದ್ದನ್ನು ಬಿಟ್ಟರೆ, ಜನ ಮೆಚ್ಚುವ ಆಡಳಿತವನ್ನೇ ಕೊಟ್ಟಿದ್ದರು. ಅಧಿಕಾರಕ್ಕೆ ಬರುತ್ತಿದ್ದಂತೆ ಅರಸು ಅವರಂತೆಯೇ 2014ರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮಾಡಿಸಿದರು. ಪರಿಶಿಷ್ಟ ಜಾತಿ-ಪಂಗಡಗಳ ಅಭಿವೃದ್ಧಿಗಾಗಿ ಎಸ್ಸಿ ಎಸ್ಪಿ/ಟಿಎಸ್ಪಿ ಕಾಯಿದೆ ಜಾರಿಗೆ ತಂದರು. ಗುತ್ತಿಗೆಯಲ್ಲಿ ಮೀಸಲಾತಿ ಕಲ್ಪಿಸಿದರು. ಬಡ್ತಿ ಮೀಸಲಾತಿಗಳನ್ನು ತಂದರು. ಬಡವರಿಗೆ ಅಕ್ಕಿ ಕೊಟ್ಟು, ಅನ್ನರಾಮಯ್ಯ ಎನಿಸಿಕೊಂಡರು. ನುಡಿದಂತೆ ನಡೆದ ಸರ್ಕಾರ ಎನ್ನುವುದನ್ನು ಕೆಲಸಗಳ ಮೂಲಕ ಮಾಡಿ ತೋರಿಸಿದರು.

ಹಾಗಾಗಿ ಎರಡನೇ ಬಾರಿಗೆ, 2023ರಲ್ಲಿ ಮುಖ್ಯಮಂತ್ರಿಯಾದಾಗ- ನಾಡಿನ ಜನರ ನಿರೀಕ್ಷೆ ಬೆಟ್ಟದಷ್ಟಿತ್ತು. ಆ ನಿರೀಕ್ಷೆಗೆ ತಕ್ಕಂತೆ ಅಧಿಕಾರಕ್ಕೇರುತ್ತಿದ್ದಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದರು. ಆದರೆ, ಅವುಗಳಿಂದ ಆದ ಆರ್ಥಿಕ ಚಲನಶೀಲತೆಯನ್ನು, ಸಾಮಾಜಿಕ ಬದಲಾವಣೆಯನ್ನು ಮತ್ತು ಮಹಿಳಾ ಸಬಲೀಕರಣವನ್ನು- ನಮ್ಮ ಸಾಧನೆ ಎಂದು ಹೇಳಿಕೊಳ್ಳುವಲ್ಲಿ ಎಡವಿದರು. ಇಂದು ಬಿಜೆಪಿಯ ಮೋದಿಯವರೇ ಕಾಂಗ್ರೆಸ್ ಗ್ಯಾರಂಟಿ ಯೋಜನೆಗಳಿಂದ ಪ್ರೇರಣೆ ಪಡೆದು, ಇತರ ರಾಜ್ಯಗಳಲ್ಲಿ ಅನುಷ್ಠಾನಗೊಳಿಸಿದರೂ, ಇಲ್ಲಿ ಪಕ್ಷದ ಶಾಸಕರೇ ವ್ಯಂಗ್ಯವಾಡತೊಡಗಿದರು. ಇನ್ನು ಸಚಿವರಲ್ಲಿ ದಕ್ಷತೆ, ಭ್ರಷ್ಟಾಚಾರ ಮುಕ್ತ ಆಡಳಿತ ಎನ್ನುವುದು, ಹಿಂದಿನಂತಿರದಿದ್ದರೂ ತೊಂದರೆಯಿಲ್ಲ; ಬಿಜೆಪಿ ಸರ್ಕಾರಕ್ಕಿಂತ ಕಡಿಮೆಯಾಗಲಿಲ್ಲ. ಜೊತೆಗೆ ಮುಡಾ ಹಗರಣ, ವಾಲ್ಮೀಕಿ ನಿಗಮದ ಅಕ್ರಮ, ಸಚಿವರ ರಾಜೀನಾಮೆ, ಕ್ರಿಕೆಟ್ ಕಾಲ್ತುಳಿತ- ಈ ವೈಫಲ್ಯಗಳ ಜೊತೆಗೆ, ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಸಿದ್ದರಾಮಯ್ಯನವರು, ಐದು ವರ್ಷ ನಾನೇ ಮುಖ್ಯಮಂತ್ರಿ ಎಂದು ಹೇಳುವುದರಲ್ಲಿಯೇ ಕಾಲ ಕಳೆದರು. ಅವರಷ್ಟೇ ಅಲ್ಲ, ಅವರ ಸಚಿವ ಸಂಪುಟ ಸದಸ್ಯರು ಕೂಡ ಅದಕ್ಕೆ ಸ್ವರ ಸೇರಿಸಿ, ಸಮಯ ವ್ಯರ್ಥ ಮಾಡಿದರು. ಸಚಿವ ರಾಜಣ್ಣರನ್ನು ಬಲಿ ಕೊಟ್ಟರು. ಜನರ ಆಶೋತ್ತರಗಳನ್ನು ಮರೆತರು.

ಎಸ್ಸಿ ಪಿ, ಟಿಎಸ್ಪಿ ಕಾಯ್ದೆಯ ಮೂಲಕ ಪರಿಶಿಷ್ಟ ಜಾತಿ-ಪಂಗಡಗಳಿಗೆ ಮೀಸಲಿಟ್ಟ ಹಣವನ್ನು ಬೇರೆಡೆಗೆ ವರ್ಗಾಯಿಸಿ, ಈ ಸರ್ಕಾರವನ್ನು ಅಸ್ತಿತ್ವಕ್ಕೆ ತಂದ ಸಮುದಾಯಗಳಿಗೆ ಸ್ಪಷ್ಟಪಡಿಸದೆ ಸುಮ್ಮನಾದರು. ಹಾಗೆಯೇ ಒಳಮೀಸಲಾತಿ ಹಂಚಿಕೆ ವಿಚಾರದಲ್ಲಿ, ದೃಢ ನಿರ್ಧಾರ ತಳೆಯದ ಸಿದ್ದರಾಮಯ್ಯನವರು, ಅಂಚಿನ ಜನರ ಬೆನ್ನಿಗೆ ನಿಲ್ಲದೆ ವಂಚಿಸಿದರು. 2014ರಲ್ಲಿ ಸಮೀಕ್ಷೆ ಮಾಡಿಸಿದ್ದರೂ, ಬಲಾಢ್ಯರಿಗೆ ಮಣಿದು ಅದನ್ನು ಈ ಅವಧಿಯಲ್ಲಿ ಅಲಕ್ಷಿಸಿದರು. ದಮನಿತ ಜಾತಿಗಳ ಅವಕಾಶಗಳನ್ನು ಕಳೆದರು.

ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಕೋಮುವಾದಿ ಅಜೆಂಡಾವನ್ನು ಎದುರಿಸಲೆಂದೇ ಈ ರಾಜ್ಯದ ಅಲ್ಪಸಂಖ್ಯಾತರು, ದಲಿತರು, ಕೋಮುವಾದ ವಿರೋಧಿ ಮನೋಭಾವದ ಜನರು ಕಾಂಗ್ರೆಸ್ ಪಕ್ಷದ ಬೆನ್ನಿಗಿದ್ದು ಬೆಂಬಲಿಸಿದ್ದರು. ಆದರೆ, ಆ ವಿಚಾರದಲ್ಲಿ ಅಗತ್ಯವಿರುವ ತಾತ್ವಿಕ, ರಾಜಕೀಯ ಕಾರ್ಯಕ್ರಮ ರೂಪಿಸುವಲ್ಲಿ ಸಿದ್ದರಾಮಯ್ಯನವರು ಸೋತರು.

ಒಟ್ಟಿನಲ್ಲಿ ದೇವರಾಜ ಅರಸು ಹಾಕಿಕೊಟ್ಟ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಗಾಗಿನ ಭದ್ರ ಬುನಾದಿಯ ಮೇಲೆ ಸಿದ್ದರಾಮಯ್ಯನವರು ಭವ್ಯ ಸೌಧವನ್ನೇ ನಿರ್ಮಿಸುವ ಅಪೂರ್ವ ಅವಕಾಶವಿತ್ತು. ಆದರೆ, ಕಳೆದ ಎರಡೂವರೆ ವರ್ಷಗಳಲ್ಲಿ ಅದು ಕಾಣದಾಯಿತು. ಹಿಂದುಳಿದ ನಾಯಕ ಎನ್ನುವುದು ಸಮಾರಂಭ-ಸಮ್ಮೇಳನಗಳ ಘೋಷಣೆಗಳಿಗಷ್ಟೇ ಸೀಮಿತವಾಯಿತು. ಹಾಗಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರು, ದೇವರಾಜ ಅರಸರ ದಿನಗಳ ದಾಖಲೆ ದಾಟಿದ್ದಾರೆ, ದಾಟಬೇಕಾದ್ದು ಇನ್ನೂ ಇದೆ.

ಬೀದಿಯಲ್ಲೇ ಸವೆಯುವ ಬದುಕು; ಸೂರಿಲ್ಲದ ಜನರ ಗೋಳು ಕೇಳೋರಿಲ್ಲ



ಬೆಂಗಳೂರು ನಿದ್ದೆಗೆ ಜಾರಿತ್ತು. ಆದರೆ ಎಲ್ಲರೂ ಮಲಗಿರಲಿಲ್ಲ. ಕೆಲವರಿಗೆ ರಾತ್ರಿ ಎಂದರೆ ವಿಶ್ರಾಂತಿ ಅಲ್ಲ ಅದೊಂದು ಬದುಕು ಉಳಿಸಿಕೊಳ್ಳುವ ಹೋರಾಟ. ರಾತ್ರಿ ಅಂದ್ರೆ, ನಿದ್ದೆಯ ಸಮಯ. ಆದ್ರೆ ಎಲ್ಲರಿಗೂ ಅಲ್ಲ. ಈ ನಗರದಲ್ಲಿ, ಕೆಲವು ತಾಯಂದಿರಿಗೆ ರಾತ್ರಿ ಎಂದರೆ ಜಾಗರಣೆ. ವಯಸ್ಸಾದವರಿಗೆ- ಮಕ್ಕಳಿಗೆ ಚಳಿಯನ್ನು ಗೆಲ್ಲುವ ಸವಾಲು ಇದು ಬೆಂಗಳೂರು, ನಮ್ಮ ನಗರ.

ಸಂಜೆಯಾದರೆ ಮೈ ಕೊರೆಯುವ ಚಳಿ, ಬೆಳಿಗ್ಗೆ ಹತ್ತಾದರೂ ಕಾಣದ ಸೂರ್ಯ. ಈ ವರ್ಷ ಹೆಚ್ಚು ಚಳಿ, ಇದಕ್ಕೆ ನಾನಾ ಕಾರಣಗಳು. ಇಂತಹ ಚಳಿಗಾಲದಲ್ಲಿ ಸೂರಿದ್ದವರು ಹೇಗೋ ನಿಭಾಯಿಸುತ್ತಾರೆ. ಆದರೆ, ಆಕಾಶವೇ ಸೂರು, ಭೂಮಿಯೇ ಚಾಪೆಯಾಗಿಸಿಕೊಂಡವರ ಕತೆಗಳು ಮನ ಕಲಕುತ್ತವೆ. ಆ ದೃಶ್ಯಗಳನ್ನು ಕಣ್ಣಾರೆ ಕಂಡವರು ಚಳಿಯಲ್ಲೂ ಬೆವರೋದು ಖಂಡಿತ. ಪಾರ್ಕ್‌ಗಳು, ಮೆಟ್ರೋ ನಿಲ್ದಾಣಗಳು, ಬಸ್ ಸ್ಟ್ಯಾಂಡ್‌ಗಳು, ಫುಟ್‌ಪಾತ್‌ಗಳು ಮತ್ತು ಫ್ಲೈಓವರ್‌ಗಳ ಕೆಳಗೆ ರಾತ್ರಿ ಹೊತ್ತಿನಲ್ಲಿ ಮನುಷ್ಯರು ಮಲಗುತ್ತಾರೆ. ಹಾಸಿಗೆ ಇಲ್ಲ, ಹೊದಿಕೆ ಇಲ್ಲ, ಸುರಕ್ಷತೆ ಇಲ್ಲ. ದಿನವಿಡೀ ಜೀವನದ ಓಟದಲ್ಲಿ ಕಣ್ಣಿಗೆ ಬೀಳದ ಈ ಜನರು; ರಾತ್ರಿಯಲ್ಲಿ ನಗರವೇ ಅವರಿಗೆ ತಾತ್ಕಾಲಿಕ ಮನೆ ಆಗುತ್ತದೆ. ಒಂದೆಡೆ ಸಾವಿರಾರು ಕೋಟಿ ರೂಪಾಯಿಗಳ ಮೌಲ್ಯದ ಕಾರ್ಪೊರೇಟ್ ಕ್ಯಾಂಪಸ್‌ಗಳು, ಮತ್ತೊಂದೆಡೆ ಚಳಿ, ಹಸಿವು ಮತ್ತು ಭಯದ ನಡುವೆ ಮಲಗುವ ಮಾನವರು. ಈ ವೈರುಧ್ಯ ಕಾಣ ಬೇಕಿದ್ದರೆ ನಡು ರಾತ್ರಿ ಬೆಂಗಳೂರು ನಗರ ಸುತ್ತಾಡಬೇಕು. ಇಡೀ ರಾತ್ರಿ ಜಗತ್ತು ಬೆಚ್ಚಗೆ ರಗ್ಗು ಹೊದ್ದು ಮಲಗಿದ್ದರೆ ಈ ಸೂರಿಲ್ಲದ ಜೀವಗಳು ನಡುಗುತ್ತಾ ಎಚ್ಚರದ ರಾತ್ರಿಗಳನ್ನು ಕಳೆಯುತ್ತಿವೆ.

ಬೆಂಗಳೂರು, ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲ್ಪಡುವ ನಗರ, ಬೆಳೆಯುತ್ತಿರುವ ಆರ್ಥಿಕ ಕೇಂದ್ರವಾಗಿ ಕಾಣುತ್ತದೆ. ಪ್ರತಿನಗರದಲ್ಲೂ ನಿರಾಶ್ರಿತರು ಇರುತ್ತಾರೆ. ಸ್ಲಂಗಳು ಇರುತ್ತವೆ. ಹಾಗೆಯೇ ನಮ್ಮ ಬೆಂಗಳೂರು ಕೂಡ. ರಾತ್ರಿಯಲ್ಲಿ ಈ ನಗರದ ಮತ್ತೊಂದು ಮುಖ ತೆರೆದುಕೊಳ್ಳುತ್ತದೆ. ಸಾರಿಗೆಯ ಗದ್ದಲ, ಹಾರ್ನ್‌ಗಳ ಅಬ್ಬರ, ಮತ್ತು ಜೀವನದ ಓಟದ ನಡುವೆ ಈ ನಗರದಲ್ಲಿ ಸಾವಿರಾರು ಜನರು ಸೂರು ಇಲ್ಲದೆ, ಹೊದಿಕೆಯಿಲ್ಲದೇ ಮಲಗುತ್ತಾರೆ. ತೀರಾ ವಯಸ್ಸಾದವರು, ಪುಟ್ಟ ಮಕ್ಕಳು, ಮಹಿಳೆಯರು, ಹದಿ ಹರೆಯದ ಹೆಣ್ಣುಮಕ್ಕಳು, ಯುವಕರು, ಕಾಯಿಲೆ ಪೀಡಿತರು, ವ್ಯಸನಿಗಳು ಎಲ್ಲರೂ ಬಸ್ ನಿಲ್ದಾಣ, ಸಾರ್ವಜನಿಕ ಸ್ಥಳಗಳಲ್ಲಿ ಮುರುಟಿ ಮಲಗಿರುತ್ತಾರೆ. ಮಹಿಳೆಯರ ಸುರಕ್ಷತೆ ಎಂಬುದು ಈ ಜಾಗಗಳಲ್ಲಿ ಕನಸು.

ನಿರಾಶ್ರಿತ ಜನರು ಎದುರಿಸುತ್ತಿರುವ ಪರಿಸ್ಥಿತಿಗಳನ್ನು ಮತ್ತು ಕುಸಿಯುತ್ತಿರುವ ತಾಪಮಾನವನ್ನು ಅವರು ಹೇಗೆ ನಿಭಾಯಿಸುತ್ತಿದ್ದಾರೆ ಎಂಬುದನ್ನು ಪರಿಶೀಲಿಸಲು ಈ ದಿನ.ಕಾಮ್ ನಗರದಾದ್ಯಂತ ರಿಯಾಲಿಟಿ ಚೆಕ್ ಮಾಡಿದಾಗ, ಹೆಚ್ಚಿನವರು ಫ್ಲೈಓವರ್‌ಗಳ ಕೆಳಗೆ, ಸಾರಿಗೆ ಕೇಂದ್ರಗಳ ಬಳಿ, ಆಸ್ಪತ್ರೆಗಳ ಬಳಿ ಆಶ್ರಯ ಪಡೆದಿದ್ದರು. ಕೆ.ಆರ್. ಮಾರುಕಟ್ಟೆ, ಮೆಜೆಸ್ಟಿಕ್ ಬಸ್‌ಸ್ಟ್ಯಾಂಡ್, ಎಂ ಜಿ ರಸ್ತೆ, ಮಲ್ಲೇಶ್ವರ ಮುಂತಾದ ಕಡೆಗಳಲ್ಲಿ ಈ ದಿನ ತಂಡ ಸುತ್ತಾಡಿದಾಗ ಕಂಡಿದ್ದು ಮನ ಕಲಕುವ ದೃಶ್ಯಗಳು. ಅನೇಕರು ಬಸ್ ನಿಲ್ದಾಣಗಳ ಮೂಲೆಗಳಲ್ಲಿ ಮಲಗಿದ್ದರು. ಕೆಲವು ಜಾಗಗಳು ದುರ್ವಾಸನೆಯಿಂದ ಕೂಡಿತ್ತು.

ಬೆಂಗಳೂರು ನಿದ್ದೆಗೆ ಜಾರಿತ್ತು. ಆದರೆ ಎಲ್ಲರೂ ಮಲಗಿರಲಿಲ್ಲ. ಕೆಲವರಿಗೆ ರಾತ್ರಿ ಎಂದರೆ ವಿಶ್ರಾಂತಿ ಅಲ್ಲ ಅದೊಂದು ಬದುಕು ಉಳಿಸಿಕೊಳ್ಳುವ ಹೋರಾಟ. ರಾತ್ರಿ ನಿದ್ದೆಯ ಸಮಯ. ಆದ್ರೆ, ಎಲ್ಲರಿಗೂ ಅಲ್ಲ. ಈ ನಗರದಲ್ಲಿ, ಕೆಲವು ತಾಯಂದಿರಿಗೆ ರಾತ್ರಿ ಎಂದರೆ ಭಯ. ಕೆಲವು ಮಕ್ಕಳಿಗೆ ರಾತ್ರಿ ಎಂದರೆ ಚಳಿ. ಇದು ಬೆಂಗಳೂರು, ನಮ್ಮ ನಗರ. ಮೊದಲು ನಮ್ಮ ಪಯಣ ಶುರುವಾಗಿದ್ದು ಎಂ ಜಿ ರೋಡ್ ಮೂಲಕ.

ಮೊದಲು ನಮ್ಮ ಹೆಜ್ಜೆ ಬಿದ್ದದ್ದು ಎಂ ಜಿ ರೋಡ್‌ಗೆ. ಗದ್ದಲ, ಸಂಗೀತದಿಂದ ತುಂಬಿದ್ದ ಎಮ್‌ಜಿ ರೋಡ್‌ನಲ್ಲಿ ಪಬ್‌ಗಳಿಂದ ಹೊರಬರುತ್ತಿದ್ದ ಯುವಕ-ಯುವತಿಯರ ಮುಖಗಳಲ್ಲಿ ಖುಷಿಯ ಹೊಳಪಿತ್ತು. ಇವೆಲ್ಲವೂ ''ಐಟಿ ಸಿಟಿ'' ಎಂಬ ನಗರದ ಹೆಮ್ಮೆಯನ್ನು ನೆನಪಿಸುತ್ತಿದ್ದವು. ಆದ್ರೆ ಅದೇ ರಸ್ತೆಯ ಅಂಚಿನಲ್ಲಿ ಮತ್ತೊಂದು ಜೀವನ ನಮ್ಮ ಕಣ್ಣೆದುರು ಬಂದಿತ್ತು. ಚಿಕ್ಕ ಚಿಕ್ಕ ಮಕ್ಕಳು, ಮಧ್ಯರಾತ್ರಿ ಎನ್ನದೇ, ಹೂಗಳ ಗುಚ್ಛ ಹಿಡಿದು ''ಅಣ್ಣ, ಅಕ್ಕ ತಗೊಳ್ಳಿ ಪ್ಲೀಸ್'' ಅಂತ ಕೈ ಚಾಚುತ್ತಿದ್ದರು. ಅವರ ಕಣ್ಣುಗಳಲ್ಲಿ ಹೊಟ್ಟೆಪಾಡಿನ ಹಸಿವು ಹೆಪ್ಪಾಗಿ ಮಿನುಗುತ್ತಿತ್ತು, ಆದರೆ ರಸ್ತೆಯ ದೀಪಗಳು ಅದನ್ನು ಮರೆಮಾಚುತ್ತಿದ್ದವು. ಅವರ ಕಣ್ಣಲ್ಲಿ ನಿದ್ದೆಯಿಲ್ಲ, ಕನಸೂ ಇರಲಿಲ್ಲ, ಇದ್ದಿದ್ದು ಕೇವಲ ಹೊಟ್ಟೆಪಾಡಿನ ಬೇಡಿಕೆ. ಇದು ಮಕ್ಕಳ ಕಾರ್ಮಿಕತೆಯಲ್ಲವೇ? ಕಾನೂನುಗಳು ಪುಸ್ತಕಗಳಲ್ಲಿ ಮಾತ್ರವೇ? ಸಾಮಾಜಿಕ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಇಲಾಖೆ ಎಲ್ಲಿ? ಬೆಳಕಿನ ನಡುವೆ ಕತ್ತಲೆ ಕಾಣಿಸದೇ ಹೋಗಿದೆಯೇ?

ಅದೇ ರಸ್ತೆಯ ಇನ್ನೊಂದು ಬದಿಯಲ್ಲಿ ಪೋಲಿಯೋದಿಂದ ಕುಂಟುತ್ತಾ ನಡೆಯುತ್ತಿದ್ದ ಒಬ್ಬ ವ್ಯಕ್ತಿ ತನ್ನ ಜೀವನದ ಹೋರಾಟವನ್ನು ಭಿಕ್ಷೆಯ ಮೂಲಕ ನಿಭಾಯಿಸುತ್ತಿದ್ದ. ವಾರಕ್ಕೆ ಕೇವಲ ಎರಡು ಅಥವಾ ಮೂರು ಬಾರಿ ಮಾತ್ರ ಭಿಕ್ಷೆ ಬೇಡುತ್ತೇನೆ ಎಂದು ಅವನು ಹೇಳಿದಾಗ, ಅದು ಚಳಿಯಂತೆಯೇ ನನ್ನ ಮನಸ್ಸನ್ನು ಕೊರೆಯಿತು. ಈ ವ್ಯವಸ್ಥೆ ಯಾರನ್ನು ಎಲ್ಲಿಗೆ ತಳ್ಳುತ್ತದೆ ಅನ್ನೋದನ್ನ ಹೇಳಿಬಿಟ್ಟಿತ್ತು ಆತನ ಅಸಹಾಯಕ ಮಾತುಗಳು. ಜೀವನದ ಈ ಅಸಮಾನತೆಯು ನಗರದ ರಸ್ತೆಗಳಲ್ಲಿ ಒಂದು ಕಡೆ ಬೆಳಕು, ಮತ್ತೊಂದು ಕಡೆ ಕಡು ಕತ್ತಲು. ಬೆಳಕಿನ ತೇರಿನಲ್ಲಿ ಛಾಯೆಯ ಕತ್ತಲು ನರ್ತಿಸುತ್ತದೆ, ಒಂದು ಕಡೆ ಸಂಪತ್ತಿನ ಸುಖ, ಮತ್ತೊಂದು ಕಡೆ ಬಡತನದ ಬಿಸಿಲು. ಆಗಲೇ ಎಂ ಜಿ ರೋಡ್ ಹೇಳಿಬಿಟ್ಟಿತು

ರಾತ್ರಿ ಮೂರರ ಹೊತ್ತಿಗೆ ಬೆಂಗಳೂರು ಚಳಿ ಸುಮಾರು 15 ಡಿಗ್ರಿಗೆ ಇಳಿದಿತ್ತು. ಆಗಲೇ ನಾವು ಮೆಜೆಸ್ಟಿಕ್ ತಲುಪಿದ್ದೆವು. ಮೆಜೆಸ್ಟಿಕ್ ಇದು ನಗರದ ಹೃದಯಭಾಗ. ಇಲ್ಲಿ ಕಂಡ ದೃಶ್ಯಗಳು ಇನ್ನಷ್ಟು ಮನ ಕಲಕುವಂಥವು. ಇದನ್ನೇ ''ಬೆಂಗಳೂರಿನ ಚಳಿ'' ಅಂತ ನಾವು ಮಾತಿನಲ್ಲೇ ಹೇಳಿಬಿಡ್ತೀವಿ. ಆದ್ರೆ ಆ ಚಳಿ, ಹೊದಿಕೆ ಇಲ್ಲದವರ ಮೇಲೆ ಹೇಗೆ ಬೀಳುತ್ತೆ ಅನ್ನೋದನ್ನ ಮೆಜೆಸ್ಟಿಕ್ ಸ್ಪಷ್ಟವಾಗಿ ತೋರಿಸಿತು. ಮಹಿಳೆ-ಪುರುಷ ಅನ್ನೋ ಭೇದವೇ ಇಲ್ಲ. ರಸ್ತೆ ಬದಿಯಲ್ಲಿ, ಚರಂಡಿ ಪಕ್ಕದಲ್ಲೇ, ಬಸ್ ನಿಲ್ದಾಣಗಳ ಮೂಲೆಗಳಲ್ಲಿ ಜನರು ನಿದ್ದೆಗೆ ಜಾರಿದ್ದರು. ಚರಂಡಿಗಳ ಪಕ್ಕದಲ್ಲಿ ನಿದ್ದೆಯ ಸುಖವನ್ನು ಹುಡುಕಿದ್ದರು. ಹೋಟೆಲ್‌ಗಳ ಕಸದ ರಾಶಿಗಳ ನಡುವೆಯೇ ಆಶ್ರಯದ ಕನಸುಗಳು ಮಲಗಿತ್ತು.

ಕೆಲವರು ದೇವರ ಮೂರ್ತಿ ಇಟ್ಟು, ''ದೇವರು ನಮ್ಮನ್ನ ಕಾಪಾಡ್ತಾನೆ'' ಅನ್ನೋ ನಂಬಿಕೆಯಲ್ಲಿ ಕಣ್ಣು ಮುಚ್ಚಿದ್ದರು. ತಾಯಿ ತನ್ನ ಚಿಕ್ಕ ಚಿಕ್ಕ ಮಕ್ಕಳನ್ನ ಗುಬ್ಬಚ್ಚಿಗಳಂತೆ ಒಡಲಲ್ಲಿ ಹಾಕಿಕೊಂಡು, ಅವರನ್ನ ಬೆಚ್ಚಗೆ ಮಲಗಿಸಿ, ತಾನೂ ಆ ಕೊರೆಯುವ ಚಳಿಯಲ್ಲಿ ನಿದ್ದೆಗೆ ಜಾರಿದ್ದಳು. ಒಂದು ದೃಶ್ಯ ಹೃದಯ ತಾಕದೇ ಇರಲು ಸಾಧ್ಯವೇ? ಅವಳಿಗೆ ಹೊದಿಕೆ ಇರಲಿಲ್ಲ, ಆದ್ರೆ ಮಕ್ಕಳಿಗೆ ಮಾತ್ರ ತಾಯಿ ಇದ್ದಳು. ಮಕ್ಕಳಿಗೆ ತಾಯಿಯ ದೇಹವೇ ಹೊದಿಕೆಯಾಗಿತ್ತು.

ಇದು ನಗರ ಹೊರವಲಯವಲ್ಲ. ಇದು ಬೆಂಗಳೂರಿನ ಹೃದಯಭಾಗ ಎಂದು ನಾನು ಮತ್ತೊಮ್ಮೆ ನೆನಪಿಸಿಕೊಂಡೆ. ಬಿಬಿಎಂಪಿಯ ರಾತ್ರಿ ಶೆಲ್ಟರ್‌ಗಳು ನಿಜವಾಗಿಯೂ ಇವೇಯೆ? ಇದ್ದರೆ, ಜನರು ರಸ್ತೆಯಲ್ಲೇಕೆ ಇದ್ದಾರೆ? ಪ್ರತಿ ವರ್ಷ ಇದೇ ಸ್ಥಿತಿ, ಇದೇ ವರದಿಗಳು, ಇದೇ ಭರವಸೆಗಳು ಆದ್ರೆ ಉತ್ತರ ಮಾತ್ರ ಇಲ್ಲ.

ರಸ್ತೆಗಳು ತರಕಾರಿ, ಹಣ್ಣುಗಳ ರಾಶಿಗಳಿಂದ ತುಂಬಿ ಹೋಗಿದ್ದವು. ಆದರೆ ಅಲ್ಲೇ ಸುತ್ತಮುತ್ತಲಿನ ನಿರಾಶ್ರಿತರು ಚಳಿಯನ್ನು ಎದುರಿಸುತ್ತಾ, ಫ್ಲೈಓವರ್ ಕೆಳಗೆ, ಬಸ್ ನಿಲ್ದಾಣದ ಮೂಲೆಗಳಲ್ಲಿ ಆಶ್ರಯ ಹುಡುಕಿದ್ದರು. ಮಲ್ಲೇಶ್ವರದಂತಹ ಇತರ ಕಡೆಗಳಲ್ಲೂ ಇದೇ ದೃಶ್ಯ ಸಾರಿಗೆ ಕೇಂದ್ರಗಳು ಮತ್ತು ಆಸ್ಪತ್ರೆಗಳ ಬಳಿ ನಿರಾಶ್ರಿತರು ಚಳಿಗೆ ಚಾಲೆಂಜ್ ಮಾಡಿ ನಿದ್ರೆಗೆ ಜಾರಿದ್ದರು. ನಗರ ಎಚ್ಚರವಾಗುತ್ತಿತ್ತು. ಆದ್ರೆ ರಾತ್ರಿ ಪೂರ್ತಿ ಕಣ್ಣು ಮುಚ್ಚದ ಜೀವಗಳ ಕಥೆ ಮಾತ್ರ ಯಾರ ಗಮನಕ್ಕೂ ಬಾರದೇ ಉಳಿದಿತ್ತು. ನಗರದಿಂದ ಆದಾಯ ಬೇಕು.

ನಗರದ ಜನರಿಗೆ ರಕ್ಷಣೆ ಬೇಡವೇ? ಎಂತಹ ದುರಂತ ನೋಡಿ. ಇದನ್ನು ದುರಂತ ಅಂತ ಕರೆಯುವುದು ಬಹುಷಃ ಸುಲಭ. ಆದ್ರೆ ಇದು ಬರೀ ದುರಂತ ಅಲ್ಲ ಇದು ಅಪರಾಧ, ನಿರ್ಲಕ್ಷ್ಯದ ಅಪರಾಧ, ಆಡಳಿತ ವೈಫಲ್ಯದ ಅಪರಾಧ. ಇದು ಆರೋಪ ಅಲ್ಲ. ಬದಲಿಗೆ ಇದು ನಮ್ಮ ಕ್ಯಾಮೆರಾ ಕಂಡ ಸತ್ಯ.

ಒಂದು ರಾತ್ರಿ, ನೂರು ಪ್ರಶ್ನೆಗಳು ನಮ್ಮನ್ನು ಕಾಡಿತ್ತು. ಈ ಒಂದು ರಾತ್ರಿ ನಮ್ಮೆಲ್ಲರ ಕಣ್ಣನ್ನೇ ತೆರೆಸಿತು. ಬೆಂಗಳೂರಿನ ಒಂದು ರಾತ್ರಿ, ಹೇಗೆ ಇರುತ್ತೆ ಅನ್ನೋದಕ್ಕಿಂತ, ಬೆಂಗಳೂರಿನ ಕೆಲವು ಜೀವಗಳಿಗೆ ಪ್ರತಿದಿನವೂ ರಾತ್ರಿ, ಹೇಗಿರತ್ತೆ ಅನ್ನೋ ಪ್ರಶ್ನೆ ಉಳಿದುಬಿಟ್ಟಿತು.

ನಗರ ಬೆಳಗುತ್ತೆ. ಆದ್ರೆ ಎಲ್ಲರ ಬದುಕು ಬೆಳಗುತ್ತದೆಯಾ? ಅಭಿವೃದ್ಧಿ ಅನ್ನೋ ಮುಖವಾಡದ ಹಿಂದೆ ರಸ್ತೆ ಮೇಲೆ ಮಲಗುವ ಜೀವಗಳು ಮರೆಮಾಚಲಾಗುತ್ತಿದೆ. ಫ್ಲೈಓವರ್‌ಗಳ ಕೆಳಗೆ ಮಲಗುವ ಜನರಿರುವ ನಗರ ವಿಶ್ವಮಟ್ಟದ ನಗರ ಅಲ್ಲವೇ ಅಲ್ಲ. ಸರ್ಕಾರ ಮತ್ತು ಬಿಬಿಎಂಪಿಗೆ ಒಂದು ಪ್ರಶ್ನೆ ಈ ನಗರ ಯಾರಿಗಾಗಿ? ಈ ನಿರಾಶ್ರಿತರಿಗೆ ಸರ್ಕಾರದ ಯಾವ ಯೋಜನೆಯೂ ಗೊತ್ತಿಲ್ಲ. ಆದರೆ, ಅವರಿಗೆ ಬೇಕಿರುವುದು ಒಂದು ಸುರಕ್ಷಿತ ರಾತ್ರಿ ಮಾತ್ರ.

ಬೆಂಗಳೂರು ವಸತಿರಹಿತರ ಸಮೀಕ್ಷಾ ವರದಿಯ ಪ್ರಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಯ ಪಶ್ಚಿಮ ವಲಯವು ಅತಿ ಹೆಚ್ಚು ನಿರಾಶ್ರಿತರನ್ನ ಹೊಂದಿದೆ 39.6%. ಪೂರ್ವ 25.4% ಎರಡನೇ ಸ್ಥಾನದಲ್ಲಿದೆ, ನಂತರ ಮಹಾದೇವಪುರ ವಲಯ 10% ಮೂರನೇ ಸ್ಥಾನದಲ್ಲಿದೆ. ಈ ಸಮೀಕ್ಷೆಯು ಬೆಂಗಳೂರು ವಸತಿರಹಿತ ಕಾರ್ಯಕ್ರಮದ ()ನಿಂದ ನಡೆಸಲ್ಪಟ್ಟಿತ್ತು, ಇದು ಅಜೀಂ ಪ್ರೇಮ್‌ಜಿ ಫೌಂಡೇಶನ್ ಮತ್ತು ಪ್ರಾಜೆಕ್ಟ್ ಸ್ಮೈಲ್ ಟ್ರಸ್ಟ್‌ನ ಜಂಟಿ ಉಪಕ್ರಮವಾಗಿದ್ದು, ಇದನ್ನು 2022 ರಲ್ಲಿ ನಡೆಸಲಾಯಿತು. ಸಮೀಕ್ಷಕರು 551 ಮೂರಕ್ಕಿಂತ ಹೆಚ್ಚು ನಿರಾಶ್ರಿತ ವ್ಯಕ್ತಿಗಳಿರುವ ಹಾಟ್‌ಸ್ಪಾಟ್‌ಗಳನ್ನು ಗುರುತಿಸಿದ್ದರು ಮತ್ತು 50 ಶೆಲ್ಟರ್ ಹೌಸ್‌ಗಳಲ್ಲಿ ಸುಮಾರು 1,591 ವ್ಯಕ್ತಿಗಳಿಂದ ಡೇಟಾವನ್ನು ಸಂಗ್ರಹಿಸಿದ್ದರು. ವರದಿಯಲ್ಲಿ, ಕೌಟುಂಬಿಕ ಸಂಘರ್ಷ ಪ್ರಮುಖ ಕಾರಣವೆಂದು ಗುರುತಿಸಲಾಗಿದೆ. ಪ್ರತಿಕ್ರಿಯಿಸಿದವರಲ್ಲಿ 34% ರಷ್ಟು ಜನರು ಗ್ರಾಮೀಣ ಪ್ರದೇಶಗಳಿಂದ ವಲಸೆ 27.21% ಮತ್ತು ಕೆಲಸ ಹುಡುಕಿಕೊಂಡು 26.4% ಬಂದವರಾಗಿದ್ದಾರೆ. ಬೆಂಗಳೂರಿನಲ್ಲಿ 14,189 ವ್ಯಕ್ತಿಗಳು ನಗರ ನಿರಾಶ್ರಿತರ ವರ್ಗದಲ್ಲಿದ್ದಾರೆ ಎಂದು ವರದಿಯಲ್ಲಿ ತಿಳಿಸಿದೆ. ಆದರೆ, ಅಸ್ತಿತ್ವದಲ್ಲಿರುವ ಶೆಲ್ಟರ್ ಹೌಸ್‌ಗಳು ಕೇವಲ 1,869 ಜನರಿಗೆ ಮಾತ್ರ ವಸತಿ ಕಲ್ಪಿಸಲು ಸಾಧ್ಯವಾಗಿದೆ ಅಂತ ಹೇಳಿದೆ.

ಸರ್ಕಾರಿ ಮತ್ತು ನಾಗರಿಕ ಸಂಘಟನೆಗಳ ಅಂದಾಜುಗಳ ಪ್ರಕಾರ, ಬೆಂಗಳೂರು ನಗರದಲ್ಲಿ ರಾತ್ರಿ ವೇಳೆ 8,000 ರಿಂದ 10,000ಕ್ಕೂ ಹೆಚ್ಚು ನಿರಾಶ್ರಿತರು ಬೀದಿಗಳಲ್ಲಿ ಮಲಗುತ್ತಾರೆ. ಇವರಲ್ಲಿ ಸುಮಾರು30 % 35% ಮಹಿಳೆಯರು, ಮತ್ತು 10% 12% ಶೇಕಡಾ ಮಕ್ಕಳು ಎನ್ನಲಾಗುತ್ತದೆ. ಚಳಿಗಾಲದ ಅವಧಿಯಲ್ಲಿ ನಿರಾಶ್ರಿತರಲ್ಲಿ ಉಸಿರಾಟದ ಸಮಸ್ಯೆಗಳು, ಚರ್ಮ ರೋಗಗಳು ಮತ್ತು ಸೋಂಕುಗಳು 40 ಶೇಕಡಾ ವರೆಗೆ ಹೆಚ್ಚಾಗುತ್ತವೆ ಎಂಬುದು ಸಾರ್ವಜನಿಕ ಆರೋಗ್ಯ ತಜ್ಞರ ಅಭಿಪ್ರಾಯ.

ಕಳೆದ 40 ದಿನಗಳಲ್ಲಿ 15ಕ್ಕೂ ಹೆಚ್ಚು ನಿರಾಶ್ರಿತರು ಅಸಹಜ ಮರಣಕ್ಕೀಡಾಗಿದ್ದಾರೆ ಎಂದು ಬೆಂಗಳೂರು ಸಿಟಿ ಪೊಲೀಸ್ ಡೇಟಾ ತೋರಿಸಿದೆ. ಮಲ್ಲೇಶ್ವರಂ ಮತ್ತು ಸಿಟಿ ಮಾರ್ಕೆಟ್ ಪ್ರದೇಶಗಳಲ್ಲಿ ಈ ಸಂಖ್ಯೆ ಹೆಚ್ಚಿದೆ. ಡಿಸೆಂಬರ್‌ನಲ್ಲಿ ಬೆಂಗಳೂರಿನಲ್ಲಿ 13 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ದಾಖಲಾಗಿದೆ ಎಂದು ಭಾರತ ಹವಾಮಾನ ಇಲಾಖೆ ತಿಳಿಸಿದೆ. ಈ ಚಳಿಯೂ ಕೂಡ ನಿರಾಶ್ರಿತರ ಸಾವಿಗೆ ಒಂದು ರೀತಿಯಲ್ಲಿ ಕಾರಣವಾಗುತ್ತಿದೆ. ಬೆಂಗಳೂರಿನಲ್ಲಿ, ತಾಪಮಾನ ಕುಸಿತ, ಗಾಳಿಯ ಗುಣಮಟ್ಟ, ಕಳಪೆ ಗುಣಮಟ್ಟದ ಆಹಾರ ಮತ್ತು ನೀರಿನ ಸೇವನೆ ನಿರಾಶ್ರಿತರ ಆರೋಗ್ಯದ ಮೇಲೆ ಗಂಭೀರ ಪರಿಣಾಮಗಳನ್ನ ಬೀರುತ್ತಿದೆ.

ಆದಾಗ್ಯೂ, ಈ ಚಳಿಗಾಲದಲ್ಲಿ ಅನೇಕ ಸರ್ಕಾರೇತರ ಸಂಸ್ಥೆಗಳು ಕೈಜೋಡಿಸಿ ಕಂಬಳಿಗಳು, ಆಹಾರ ಪ್ಯಾಕೆಟ್‌ಗಳು ಮತ್ತು ಇತರ ಆರೋಗ್ಯ ರಕ್ಷಣಾ ಅಗತ್ಯ ವಸ್ತುಗಳನ್ನು ವಿತರಿಸಿವೆ. ಉತ್ತರ ಬೆಂಗಳೂರಿನ ಯಶವಂತಪುರ ಮತ್ತು ವಿದ್ಯಾರಣ್ಯಪುರ ಪ್ರದೇಶಗಳಲ್ಲಿ, ಕೆಲವು ಪೊಲೀಸ್ ಅಧಿಕಾರಿಗಳು ಮತ್ತು ನಾಗರಿಕ ರಕ್ಷಣಾ ಸಿಬ್ಬಂದಿಗಳು ಚಳಿಗಾಲದ ಅಗತ್ಯ ವಸ್ತುಗಳು ಮತ್ತು ಆಹಾರವನ್ನು ನಿರಾಶ್ರಿತರಿಗೆ ಒದಗಿಸುವ ಮೂಲಕ ಕೊಡುಗೆ ನೀಡಿದ್ದಾರೆ.

ನಿರಾಶ್ರಿತ ಮಹಿಳೆಯರ ಪರಿಸ್ಥಿತಿ ಅತ್ಯಂತ ಆತಂಕಕಾರಿ. ರಾತ್ರಿ ವೇಳೆ ಪಾದಚಾರಿ ಮಾರ್ಗಗಳಲ್ಲಿ ಅಥವಾ ಬಸ್ ಸ್ಟ್ಯಾಂಡ್‌ಗಳ ಸುತ್ತ ಮಲಗುವ ಮಹಿಳೆಯರಿಗೆ ಯಾವುದೇ ರಕ್ಷಣೆಯಿಲ್ಲ. ಮಹಿಳೆಯರ ಸ್ಥಿತಿ ಅತ್ಯಂತ ದಯನೀಯ. ಅವರು ಚಳಿ ಮತ್ತು ಆರೋಗ್ಯ ಸಮಸ್ಯೆಗಳ ಜೊತೆಗೆ ಸೇಫ್ಟಿ ಚಾಲೆಂಜ್‌ಗಳನ್ನು ಎದುರಿಸುತ್ತಾರೆ. ಅನೇಕ ಮಹಿಳೆಯರು ಶೆಲ್ಟರ್‌ಗಳನ್ನು ಬಳಸದೇ ಬೀದಿಗಳಲ್ಲಿ ಮಲಗುತ್ತಾರೆ, ಏಕೆಂದರೆ ಶೆಲ್ಟರ್‌ಗಳಲ್ಲಿ ಕಾಡುವ ಅಸುರಕ್ಷಿತ ಭಾವನೆ.

ಬೆಂಗಳೂರಿನಲ್ಲಿ 48 ನೈಟ್ ಶೆಲ್ಟರ್‌ಗಳಿವೆ. ಆದರೆ ಇರುವ ನಿರಾಶ್ರಿತರ ಜನಸಂಖ್ಯೆಗೆ ಕನಿಷ್ಠ 120 ಶೆಲ್ಟರ್‌ಗಳ ಅವಶ್ಯಕತೆ ಇದೆ. ಇರುವ ಕೆಲವು ಶೆಲ್ಟರ್‌ಗಳಲ್ಲಿ ನಿರ್ವಹಣೆಯ ಕೊರತೆ, ಸರಿಯಾದ ಸಮಯಕ್ಕೆ ಫಂಡಿಂಗ್ ಇಲ್ಲದಿರುವ ಸಮಸ್ಯೆಗಳೇ ಹೆಚ್ಚಿದೆ. ನಿರಾಶ್ರಿತ ಕುಟುಂಬಗಳೊಂದಿಗೆ ಮಲಗುವ ಮಕ್ಕಳು ಶಿಕ್ಷಣದಿಂದ ದೂರಾಗುತ್ತಿದ್ದಾರೆ. ಶಾಲೆಯ ಬದಲು ಬೀದಿ ಅವರ ತರಗತಿ ಆಗಿದೆ. ಆರೋಗ್ಯ ಸೇವೆಗಳ ಕೊರತೆಯಿಂದಾಗಿ ಸಣ್ಣ ಕಾಯಿಲೆಗಳೂ ಜೀವಘಾತಕವಾಗುವ ಸಾಧ್ಯತೆ ಇದೆ. ಹಿರಿಯ ನಾಗರಿಕರು ತಮ್ಮ ಜೀವನದ ಸಂಧ್ಯಾಕಾಲವನ್ನು ಇಂತಹ ಅಮಾನುಷ ಪರಿಸ್ಥಿತಿಯಲ್ಲಿ ಕಳೆಯುವುದು ನಗರಕ್ಕೆ ಶೋಭೆಯಲ್ಲ. ಸಮಾಜದ ನೈತಿಕ ಹೊಣೆಗಾರಿಕೆ ಇಲ್ಲಿಯೇ ಪ್ರಶ್ನೆಗೆ ಒಳಗಾಗುತ್ತದೆ.

ಸರ್ಕಾರದ ಮಟ್ಟದಲ್ಲಿ ನಿರಾಶ್ರಿತರಿಗಾಗಿ ಆಶ್ರಯ ಗೃಹಗಳು, ನೈಟ್ ಶೆಲ್ಟರ್‌ಗಳು ಇದ್ದರೂ, ಅವುಗಳ ಸಂಖ್ಯೆ, ಸಾಮರ್ಥ್ಯ ಮತ್ತು ಗುಣಮಟ್ಟ ತೀರಾ ಕಳಪೆ. ಅನೇಕ ನಿರಾಶ್ರಿತರಿಗೆ ಇಂತಹ ಆಶ್ರಯಗಳ ಬಗ್ಗೆ ಮಾಹಿತಿ ಇಲ್ಲ, ಕೆಲವೆಡೆ ಮಹಿಳೆಯರಿಗೆ ಪ್ರತ್ಯೇಕ ಮತ್ತು ಸುರಕ್ಷಿತ ವ್ಯವಸ್ಥೆಗಳೇ ಇಲ್ಲ. ನಗರದ ಆಡಳಿತ, ಪೊಲೀಸ್ ಇಲಾಖೆ ಮತ್ತು ಸಾಮಾಜಿಕ ಕಲ್ಯಾಣ ಇಲಾಖೆಗಳ ನಡುವೆ ಸಮನ್ವಯದ ಕೊರತೆ ಸ್ಪಷ್ಟವಾಗಿ ಕಾಣುತ್ತದೆ. ( ) ಗೈಡ್‌ಲೈನ್ಸ್ ಪ್ರಕಾರ ಶೆಲ್ಟರ್‌ಗಳು 24/7 ಓಪನ್ ಇರಬೇಕು. ಆದರೆ ಪಾಲಿಸುತ್ತಿಲ್ಲ. ಫಂಡ್ ಕೊರತೆ ಮತ್ತು ಮಿಸ್‌ಮ್ಯಾನೇಜ್‌ಮೆಂಟ್‌ನಂತಹ ಸಮಸ್ಯೆಗಳು ಹೆಚ್ಚಿದೆ. ಕೇಂದ್ರ ಯೋಜನೆಯಾದ ದೀನದಯಾಳ್ ಅಂತ್ಯೋದಯ ಯೋಜನೆರಾಷ್ಟ್ರೀಯ ನಗರ ಜೀವನೋಪಾಯ ಮಿಷನ್ (-) ಅಡಿಯಲ್ಲಿ, ನಾಗರಿಕ ಸಂಸ್ಥೆಗಳು ಮೂಲಸೌಕರ್ಯಗಳನ್ನು ಮತ್ತು ನಿರಾಶ್ರಿತರನ್ನು ಸಂಖ್ಯೆಗಳನ್ನು ದಾಖಲಿಸುವ ಅಗತ್ಯವಿದೆ.

ರಾತ್ರಿಯ ಬೆಂಗಳೂರು ಕೇವಲ ನಿದ್ರಿಸುತ್ತಿರುವ ನಗರವಲ್ಲ, ಅದು ನಿರ್ಲಕ್ಷಿತ ಬದುಕುಗಳ ಸಮೂಹ ಎಂಬುದು ಸ್ಪಷ್ಟವಾಗಿದೆ. ಕ್ಯಾಮೆರಾಗಳ ಮುಂದೆ ಮಾತನಾಡಲು ಹಿಂಜರಿಯುವ ನಿರಾಶ್ರಿತರು, ಅವರ ಕಣ್ಣುಗಳಲ್ಲಿ ಭವಿಷ್ಯದ ಅನಿಶ್ಚಿತತೆ ಮತ್ತು ವ್ಯವಸ್ಥೆಯ ಮೇಲೆ ನಂಬಿಕೆ ಕಳೆದುಕೊಂಡ ಮನಸ್ಥಿತಿ ಇವೆಲ್ಲವೂ ಈ ವರದಿಯಲ್ಲಿ ದಾಖಲಾಗಿದೆ.

ಜನವಾದಿ ಮಹಿಳಾ ಸಂಘಟನೆಯ ಗೌರಮ್ಮ ''ಎಲ್ಲರಿಗೂ ವಸತಿ ಎನ್ನುವುದು ಗಗನ ಕುಸುಮವಾಗಿದೆ. ಗ್ರಾಮೀಣ ಭಾರತದ ಬದುಕಿನ ಸಂಕಷ್ಟಗಳು ಜನರನ್ನು ಬದುಕು ಕಟ್ಟಿಕೊಳ್ಳುವ ಭ್ರಮೆಯಲ್ಲಿ ನಗರಗಳಿಗೆ ಬರುವಂತೆ ಮಾಡುತ್ತದೆ. ಬಂದವರಿಗೆ ಕನಿಷ್ಠ ಸುರಕ್ಷಿತ ವಸತಿ ವ್ಯವಸ್ಥೆ ಕೂಡಾ ಇಲ್ಲದ ಸ್ಥಿತಿ ಇದೆ. ಮಹಿಳೆಯರು ಹಲವು ರೀತಿಯ ಸಮಸ್ಯೆ ಸಂಕಷ್ಟಗಳಿಗೆ, ಲೈಂಗಿಕ ದೌರ್ಜನ್ಯಗಳಿಗೂ ಒಳಗಾಗುತ್ತಾರೆ. ಇದು ಆಡಳಿತ ನಡೆಸುವವರ ಆದ್ಯತೆಗೆ ಹಿಡಿದ ಕನ್ನಡಿಯಾಗಿದೆ. ಸಿಲಿಕಾನ್ ಸಿಟಿಯ ಲಕ್ಸುರಿ ಉಳ್ಳವರಿಗೆ ಮಾತ್ರವೇ ಆಗಿದ್ದು ಇದು ಅಧಿಕಾರಸ್ಥರ ಉಳ್ಳವರ ಪರ ನೀತಿಗಳ ಪರಿಣಾಮವೇ ಆಗಿದೆ'' ಅಂತ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದ ಬೆಳವಣಿಗೆಯಲ್ಲಿ ನಿರಾಶ್ರಿತರನ್ನು ಮರೆಯಬಾರದು ಅವರಿಗೂ ಸೂರು, ಸುರಕ್ಷತೆ ಮತ್ತು ಗೌರವದ ಜೀವನ ಬೇಕು. ಬೆಂಗಳೂರು ಬೆಳೆಯುತ್ತಿದೆ. ಆದರೆ ಯಾರಿಗಾಗಿ? ಗಾಜಿನ ಗೋಪುರಗಳ ಬೆಳಕು, ಪಾದಚಾರಿ ಮಾರ್ಗಗಳಲ್ಲಿ ಮಲಗುವವರ ಕತ್ತಲೆಯನ್ನು ಮರೆಮಾಚಬಾರದು. ನಿರಾಶ್ರಿತರ ಬದುಕನ್ನು ಕಾಣದೆ ಮುಂದುವರಿಯುವ ಅಭಿವೃದ್ಧಿ, ನಿಜವಾದ ಪ್ರಗತಿಯಲ್ಲ. ಈ ನಗರ ತನ್ನ ಮಾನವೀಯತೆಯನ್ನು ಮರಳಿ ಕಂಡುಕೊಳ್ಳಬೇಕಿದೆ. ಈ ರಿಯಾಲಿಟಿ ಚೆಕ್ ನಗರದ ದಾರುಣ ಮುಖವನ್ನು ತೋರಿಸುತ್ತದೆ. ಈ ಲೇಖನದ ಮೂಲಕ, ನಿದ್ದೆಯಿಲ್ಲದ ಆ ರಾತ್ರಿ, ಮಾತಿಲ್ಲದ ಆ ಜೀವಗಳ ಕಥೆಯನ್ನು ನಿಮ್ಮ ಮುಂದಿಡುವ ಪ್ರಯತ್ನ ಮಾಡಿದ್ದೇವೆ. ಇನ್ನಾದರೂ ಪ್ರಭುತ್ವದ ಕಣ್ಣು ತೆರೆಯಲಿ. ಸೂರಿಲ್ಲದವರು ಬೆಚ್ಚಗಿನ ರಾತ್ರಿಗಳನ್ನು ಕಾಣುವಂತಾಗಲಿ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR